Koravanji

ಕೊರವಂಜಿ



ಜೂನ್ ೧೯೪೯

★

ಸಂಪಾದಕರು :

ಶ್ರೀ|| ರಾ. ಶಿ.


ಬರಹಗಾರರು:

ಶ್ರೀ|| ಬುಳ್ಳ
ಶ್ರೀ|| ರೇವಣ್ಣ
ಶ್ರೀ|| ಧುರಂಧರ
ಶ್ರೀ|| ಪಾಟೀಳಿ
ಶ್ರೀ|| ಕೆ. ಆರ್.
ಶ್ರೀ|| ದಾಶರಥಿ ದೀಕ್ಷಿತ್
ಶ್ರೀ|| ರುದ್ರಮ್ಮ
ಶ್ರೀ|| ಕೇಸರ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ:- ಕೇವಲ ನಾಲ್ಕಾಣೆ


ಒಗೆಯುವ ಸೋಪುಗಳು
ಹತ್ತಿ ಬಟ್ಟೆಗಳಿಗೆ
777 ಬಾರುಗಳು
ಹತ್ತಿ ಬಟ್ಟೆಗಳಿಗೆ
ಮನೆಯಲ್ಲಿ ಎಲ್ಲಾ ಕೆಲಸ
ಗಳಿಗೆ ಮತ್ತು ಕಾರ್ಖಾನೆ
ಗಳಲ್ಲಿ ಉಪಯೋಗಕ್ಕೆ
ಸೂಪರ್‌ಫೈನ್ ಕೇಕ್‌ಗಳು
ಸಿಲ್ಕು, ರೇಯನ್ ಮತ್ತು ಇತರ
ನಾಜೂಕು ಬಟ್ಟೆಗಳಿಗೆ
ಸ್ವಸ್ತಿಕ್ ಆಯಿಲ್ ಮಿಲ್ಸ್ ಲಿಮಿಟೆಡ್, ಬೊಂಬಾಯಿ
Shilpi
Som 41 Canarese

"ನಾನು ಪ್ರತಿನಿತ್ಯವೂ ಟೀ ಕುಡಿಯುತ್ತೇನೆ

ಕಡಿಮೆ ಪಕ್ಷ ಎರಡು ಸಲವಾದರೂ ತಪ್ಪಿಸುವುದೇ ಇಲ್ಲ. ಅದು ನನಗೆ ನವಚೈತನ್ಯವನ್ನು ಪ್ರಸಾದಿಸುತ್ತದೆ ಆರೋಗ್ಯ ವಿಷಯದಲ್ಲಿ ಅದರಿಂದ ಕೆಡುಕಾದ ಸಂದರ್ಭವನ್ನೇ ನಾನರಿಯೆ ಅಷ್ಟೇ ಅಲ್ಲ; ಬೆಳಗ್ಗೆ ಒಂದು ಬಟ್ಟಲು ಚಾ ಕುಡಿಯುವುದರಿಂದ ಉಲ್ಲಾಸವು ಮೂಡುವುದು. ಅಂದಿನಕಾರ್ಯಗಳನ್ನಾರಂಭಿಸಲು ಅವಶ್ಯವಾದ ಶಕ್ತ್ಯುತ್ಸಾಹಗಳನ್ನು ಅದು ಪ್ರಸಾದಿಸುವುದು."

(ದಸ್ಕತ್ತು) ಎಂ. ಎನ್. ಸಾಹಾ



ಟೀ



[illegible]

ಡಾ॥ ಮೇಘನಾಥ ಸಾಹಾ, ಡಿ ಎಸ್‌ಸಿ, ಎಫ್ ಆರ್ ಎಸ್. ರವರು ಪಲೀತ್ ಪ್ರೊಫೆಸರು ಮತ್ತು ಕಲಕತ್ತಾ ವಿಶ್ವವಿದ್ಯಾನಿಲಯದ ಫಿಜಿಕ್ಸ್ ಶಾಖೆಗೆ ಅಧ್ಯಕ್ಷರು. ಅವರು ಭಾರತ ವರ್ಷದ ವಿಖ್ಯಾತ ವೈಜ್ಞಾನಿಕ ಶಾಸ್ತ್ರ ನಿಪುಣರಲ್ಲೊಬ್ಬರು. ನ್ಯೂಕ್ಲಿಯರ್ ಫಿಜಿಕ್ಸನಬಗ್ಗೆ ಅವರು ಬರೆದ ಗ್ರಂಥಕ್ಕಾಗಿ ಅಂತರ್ಜಾತೀಯ ವಿಖ್ಯಾತಿಯನ್ನು ಪಡೆದರು ಸ್ಟೆಲ್ಲರ್‌ಸ್ಪೆಕ್ಟ್ರ ಸಿದ್ಧಾಂತ ವಿಷಯಕವಾಗಿ ಪ್ರತ್ಯೇಕ ಪ್ರಸಿದ್ಧರು. ಇದರ ದೆಸೆಯಿಂದಲೇ ಅವರಿಗೆ ರಾಯಲ್ ಸೊಸೈಟೀ ಫೆಲೋಶಿಪ್ ಲಭಿಸಿತು. 1945ರಲ್ಲಿ ನಡೆದ ರಷ್ಯ ವೈಜ್ಞಾನಿಕ ಪರಿಷತ್ತಿನ 220ನೇ ವಾರ್ಷಿಕ ಸಮಾರಂಭಕ್ಕೆ ಅವರು ಭಾರತ ವರ್ಷಕ್ಕೆ ಪ್ರತಿನಿಧಿಯಾಗಿ ಹಾಜರಾಗಿದ್ದರು.

★

ಇಂಡಿಯನ್ ಟೀ ಮಾರ್ಕೆಟ್ ಎಕ್ಸ್‌ಪಾನ್ಷನ್ ಬೋರ್ಡಿನವರಿಂದ ಪ್ರಕಟಿಸಲ್ಪಟ್ಟುದು.

ITA—32?—KN



ಸಂಪುಟ ೯ | ಜೂನ್ ೧೯೪೯ | ಸಂಚಿಕೆ ೩

**

ಕುಹಕಿಡಿಗಳು

**

"ತೋಳ ಬಂತು—ಕೆಂಪು ತೋಳ ಬಂತು" ಎಂದು ಕೂಗಿಕೊಂಡೇ ಮಿ|| ಫಾರೆಸ್ಟಾಲ್‌ರವರು ಪ್ರಾಣಹತ್ಯ ಮಾಡಿಕೊಂಡರಂತೆ.

* * *

ಷಾಂಗ್ಹೈನಲ್ಲಿ ಕಮ್ಯೂನಿಸ್ಟ್ ಸೈನಿಕರು ಹಸುರು ಮಿಶ್ರಿತವಾದ, ಖಾಕಿ ಸಮವಸ್ತ್ರ ಧರಿಸಿ, ಊರಿಗೆಲ್ಲಾ ಕೆಂಪು ಬಣ್ಣ ಹಚ್ಚಿದರಂತೆ.

* * *

ಪಂಡಿತ ನೆಹ್ರೂ ಅವರು ಐರ್ಲೆಂಡಿಗೆ ಹೋದರು ಅಂತ ಜನಾಬ್ ಲಿಯಾಕತ್ ಅಲಿ ಖಾನರವರು ಅಲ್ಸ್ಟರಿಗೆ ಹೋಗಲಿಲ್ಲವಂತೆ.

* * *

"ಆರೋಗ್ಯ ತೆರಿಗೆ"ಯನ್ನು ಹಾಕಬೇಕೆಂದು ಆರೋಗ್ಯ ಸಚಿವರು ಸಮ್ಮೇಳನದಲ್ಲಿ ಸೂಚಿಸಿದರಂತೆ.

—ನಮ್ಮ ಸಲಹೆ. ಆರೋಗ್ಯ ಇದ್ದವರು ಕೊಡಲಿ ತೆರಿಗೆ. ಮಿಕ್ಕವರಿಗೆ ರಿಯಾಯತಿ ಕೊಡಲಿ.—

* * *

ಪಕ್ಕ ಪಕ್ಕದಲ್ಲಿ ಪತ್ರಿಕೆಯಲ್ಲಿ ಬಂದ ಶಿರೋನಾಮೆಗಳು.

" ಕಿರಾತಾರ್ಜುನರ ಕಾಳಗ "

" ಪ್ರ. ಪ್ರ. ಸಭೆಯ ಅಧಿವೇಶನ "

* * *

ಈಗಿನ ಟೆಲಿಫೋನ್ ವ್ಯವಸ್ಥೆಗಳನ್ನು ನೋಡಿಯೇ ಕನ್ನಡಿಗರು "ದೂರು ವಾಣಿ" ಎಂದು ಹೆಸರಿಟ್ಟಿರುವುದು.

*   *   *

ರಾಜಾಜೀಯವರು "ಬೆಂಗಳೂರು ಬಲು ಸುಂದರವಾದ ನಗರ" ಎಂದು ಹೇಳಿದರಂತೆ.

—ಅವರ ಕನ್ನಡಕ ಹಾಕಿಕೊಂಡು ನೋಡಿದರೆ ಎಲ್ಲವೂ ಸುಂದರವೇ !

*   *   *

ಸಿಡ್ನಿ ಕಾಟನ್‌ರವರಿಗೆ ೫೦೦ ಪೌಂಡು ಜುಲ್ಮಾನೆ ಹಾಕಲಾಯಿತಂತೆ.

—ಯಾರು ಕೆಟ್ಟರು ?—ಹೈದರಾಬಾದೇ !

*   *   *

ಎಚ್ಚೆತ್ತ ಮೈಸೂರು ಎತ್ತ ಸಾಗಿದೆ ? (ಬರಲಿರುವ ಕಾದಂಬರಿ)

—ಕ್ಯೂ ಕಡೆಗೆ ?

*   *   *

ಪ್ರ. ಪ್ರ. ಸಭೆಯಲ್ಲಿ ಉಚಿತ ಉಪಾಹಾರವಿಲ್ಲ. (ಶಿರೋನಾಮೆ)

—ಹಸಿದ ಹೊಟ್ಟೇಲಿ ಕೋಪತಾಪಗಳು ಹೆಚ್ಚಲ್ಲವೇ?

*   *   *

ಒಬ್ಬಾತ ಕಾಲು ಬೆರಳುಗಳಿಂದಲೇ ಹಾರ್ಮೋನಿಯಂ ಬಾರಿಸಲು ಕಲಿತಿದ್ದಾನಂತೆ.

—ಅಂದರೆ ಆತ್ಮ ರಕ್ಷಣೆಗೆ ಎರಡೂ ಕೈಗಳು ಬಿಡುವಾಗಿರುತ್ತಲ್ಲ !

*   *   *

ಕಡ್ಡೀ ಪೆಟ್ಟಿಗೆ ಕಾರ್ಖಾನೆಯನ್ನು ನೋಡಲೋಸುಗ ನೂರು ವಿದ್ಯಾರ್ಥಿಗಳು ಶಿವಮೊಗ್ಗೆಗೆ ಪ್ರಯಾಣಮಾಡಿದರಂತೆ.

—ಅವರೆಲ್ಲರೂ ಒಂದೇ ಡಬ್ಬಿಯಲ್ಲಿ ಕುಳಿತಿದ್ದರಂತೆ.

*   *   *

ಆಕೆ ನಕ್ಕರೆ—ರಕ್ತ ತುಂಬಿ ಮುಖ ಕೆಂಪೇರುವುದಿಲ್ಲ.

—ಬಾಯಿ ಮುಖ ತುಂಬುತ್ತೆ. ಹಲ್ಲು ಬಾಯಿ ತುಂಬುತ್ತೆ—(ಕಾದಂಬರಿ)

*   *   *

ನ್ಯಾಯಾಂಗ ರಚನಾ ಸಭೆಯಲ್ಲಿ ನ್ಯಾಯಾಧೀಶರು ೬೫ ವರ್ಷಗಳ ತನಕ ಕೆಲಸ ಮಾಡಬಹುದು ಎಂದು ನಿರ್ಧರಿಸಿದ್ದಾರೆ.

—ನಮ್ಮ ದೇಶದಲ್ಲಿ ಇದನ್ನು ಜರೂರು ಆಚರಣೆಗೆ ತರಬೇಕೆಂದು ಇನ್ನೂ ಚಳುವಳಿ ಆರಂಭವಾಗಿಲ್ಲವಂತೆ.

*   *   *

ಉರಿಗಾಳು

—೧—

ದುಡಿದು ದಣಿದು ಸುಸ್ತಾಗಿರುವ ವೃದ್ಧ ಕಾಂಗ್ರೆಸ್ ನಾಯಕರ ಸ್ಥಾನಗಳಿಗೆ ಯುವಕರು ಬೇಕಾಗಿದ್ದಾರೆ. (ಕಾಳಾ ವೆಂಕಟರಾವ್)

ಒಬ್ಬನ ಪ್ರಶ್ನೆ   ಸಂಬಳ ಅಷ್ಟೇ ಕೊಡುತ್ತಾರೋ?

*   *   *

ಬೆಂಗಳೂರಿನಲ್ಲಿ ಈಚೆಗೆ ಜರುಗಿದ ಹರಿಕಥಾ ಕಾಲಕ್ಷೇಪ ಒಂದರಲ್ಲಿ ಕೀರ್ತನಕಾರರು ಸುತ್ತ ಕಳುಹಿಸಿದ, ದಕ್ಷಿಣೆ ತಟ್ಟೆ ಜಖಂ ಆಗದೆ ವ್ಯಕ್ತಿ ಅವರ ಕೈ ಸೇರಿತಂತೆ.

*   *   *

ಬಸ್ ಟಿಕೀಟ್ ಲಾಟರಿ ಪದ್ಧತಿ ಬೆಂಗಳೂರಲ್ಲಿ ಜಾರಿಗೆ ಬಂದಿರುವುದು, ದೊಡ್ಡ ಸಂಸಾರದವರಿಗೆ ಹೆಮ್ಮೆಯ ವಿಷಯ.

*   *   *

"ಇಂದಿನ ಎಂಜನಿಯರಿಂಗ್ ಕಾಲೇಜನ್ನು ನೋಡಿದರೆ, ನನಗೂ ಸೇರಬೇಕೆಂದು ತೀವ್ರ ಆಸಕ್ತಿಯಾಗುತ್ತಿದೆ" ಎಂದು ಪ್ರಖ್ಯಾತ ಎಂಜಿನಿಯರೊಬ್ಬರು ಹೇಳಿದರಂತೆ.

ಅವರು ಸರ್ ಎಂ. ವಿ. ಇರಲಾರರು.

*   *   *

ಪ್ರಜಾಪ್ರತಿನಿಧಿ ಅಧಿವೇಶನದ ಕಾಲಕ್ಕೆ ಕುದುರೆ ಜೂಜು ನಡೆಯುತ್ತಿರುವುದು ಕೇವಲ ಆಕಸ್ಮಿಕವೆಂದೂ ಅದಕ್ಕೆ ಇತರೇ ಕಾರಣಗಳನ್ನು ಹುಡುಕಬಾರದೆಂದೂ ಹೇಳಲಾಗಿದೆ.

*   *   *

"ಊಟವಾಗುತ್ತಲೂ ವಾಕರಿಕೆ ಬರುತ್ತದೆ, ಏನಾದರೂ ಔಷಧಿ . . " ಎಂದು ಹೇಳುವುದರೊಳಗೆ, ಡಾಕ್ಟರು, "ನಿಮ್ಮದೇನು ಹೆಚ್ಚು? ರೇಷನ್ ಕಾಲದಲ್ಲಿ ಎಲ್ಲರಿಗೂ ಹಾಗೆಯೇ" ಎಂದರಂತೆ.

*   *   *

ಕೈಗಾರಿಕೆಗಾಗಿ ಸಾರ್ವಜನಿಕರು ಹಣವನ್ನು ಒದಗಿಸಬೇಕು; ಇದು ಅವರ ಆದ್ಯಕರ್ತವ್ಯ" (ಭಾಷಣ) ಕೈ-ಗಾರಿಕೆ ಎಂಬ ಪದದ ವ್ಯಾಪ್ತಿಯನ್ನು ಸಾರ್ವಜನಿಕರು ತಿಳಿದಿರುವ ತನಕ, ಹಣ ಸಿಗುವುದು ಕಷ್ಟ.

*   *   *

ಕಾಲೇಜುಗಳಲ್ಲಿ ಸೀಟು ಸಿಗದವರೆಲ್ಲ ಸೇರಿ, ಒಂದು ಸ್ಟಾಂಡಿಂಗ್ ಕಮಿಟಿ ಸ್ಥಾಪಿಸಲಿರುವರಂತೆ.

*　　　*　　　*

"ಮಂತ್ರಿಗಳ ಮೌನ ಈ ಊರಿನವರಿಗೆ ಆಶ್ಚರ್ಯವನ್ನುಂಟುಮಾಡಿದೆ" (ಬಾತ್ಮಿ)...... ಆ ಊರಿನವರಿಗೇಕೆ? ಎಲ್ಲ ಊರಿನವರಿಗೂ, ಹಾಗೆಯೇ.

*　　　*　　　*

"ಈಚೆಗೆ ನಮ್ಮೂರಲ್ಲಿ ಕಳ್ಳತನ ಹೆಚ್ಚುತ್ತಿದೆ" (ಬಾತ್ಮಿ).. ಈಚೆಗೆ ಅಲ್ಲಿಗೆ ಯಾರು ಯಾರು ವರ್ಗವಾಗಿ ಹೋಗಿದ್ದಾರೊ? ವಿಚಾರಿಸಬೇಕು.

*　　　*　　　*

"ಲಂಚ ಪದ್ಧತಿ ನಿಲ್ಲಬೇಕು" —ಲಂಚ ಕೊಡುವುದನ್ನು ನಿಲ್ಲಿಸಿ!
"ಸೋತವರ ಸಂಖ್ಯೆ ಹೆಚ್ಚು" —ಪರೀಕ್ಷೆಗೆ ಕೂಡುವುದನ್ನು ನಿಲ್ಲಿಸಿ!
"ಕನ್ನ ದರೋಡೆ ಹೆಚ್ಚು" —ಗೋಡೆಗಳನ್ನೇ ಕಟ್ಟಬೇಡಿ!
"ಮಳೆ ಹಾವಳಿ ವಿಪರೀತ" —ಮನೆ ಒಳಗೇನೇ ಇರಿ!
"ಆಹಾರದ ಅಭಾವ' —ಒಪ್ಪತ್ತುಂಡವ ಭೋಗಿ!
"ಬದುಕುವುದೇ ಕಷ್ಟವಾಗಿದೆ" — ?

*　　　*　　　*

ಪ್ರಶ್ನೆ:—ಅಶೋಕ ಚಕ್ರವೆಂದರೇನು? ಉ:—ಅಡಿಕೆಪುಡಿಯಂತ್ರ.

*　　　*　　　*

ಪಠ್ಯ ಪುಸ್ತಕಗಳನ್ನು ಕೊಳ್ಳಲು ಕೂಡಲೇ ಹಂರೂ. ಕಳುಹಿಸಿ, ಎಂದು ಮಗ ಬರೆದರೆ, ಆ ತಂದೆ, ಹಣ ಕಳುಹಿಸದೆ, ಪುಸ್ತಕಗಳನ್ನೇ ಕಳುಹಿಸಿದರಂತಲ್ಲಾ, ಏನನ್ಯಾಯ?

*　　　*　　　*

ಕಿವಿ—ಮೂಗು—ಗಂಟಲು ಇವೆಲ್ಲಕ್ಕೂ ಆಸ್ಪತ್ರೆಗಳಲ್ಲಿ ಒಂದೇ ಡಾಕ್ಟರು ಚಿಕಿತ್ಸೆ ಮಾಡುತ್ತಾರೆ. ಈ ತತ್ವವನ್ನೇ ಅನುಸರಿಸಿ, ಹೋಟಲ್‌ನವರು ದ್ವಾನೆ ಗಂಟಲಿಗಿಳಿಯುವಾಗ, ಕಣ್ಣಿಗೆ ಕಾಣಿಸದೆ ಇರಲು, ಕಿವಿಗೆ ರೇಡಿಯೋ ಗಲಾಟೆ ತುಂಬುವುದು.

*　　　*　　　*

"ನಮಗೆ ವೋಟು ಕೊಟ್ಟರೆ, ನಿಮಗೆ ಮದ್ಯ ಕೊಡಿಸುತ್ತೇವೆ" ಎಂಬ ಚಳುವಳಿ ಹೂಡಿ, ಮುಂದಿನ ಚುನಾವಣೆಯಲ್ಲಿ ಜಯಹೊಂದಲು ಮದರಾಸಿನಲ್ಲಿ ಹಲವರು ಮಹನೀಯರು ಏರ್ಪಾಟು ಮಾಡುತ್ತಿರುವರಂತೆ.

*　　　*　　　*

— o —

ಅಲ್ಲೇ ಚೌರ !

ಇದೇನು ವಿಜ್ಞಾನ ಯುಗವ್ರೇ? ದೇವರೇ ಬಲ್ಲ ನನ್ನ ಕೇಳಿದರೆ ಇದು ಅಜ್ಞಾನ ಯುಗ ಅನ್ನಿಸುತ್ತೆ

ಅಲ್ಲಾ! ರೇಡಿಯೋ ಅಂತೆ ಏಟಂ ಬಾಂಬಂತೆ—ಹಾರೋಪ್ಲೇನಂತೆ, ಇಳಿಯೋ ಲಿಫ್ಟ್ ಅಂತೆ! ಎಲ್ಲೋ ಹಾಡಿದರೆ ಎಲ್ಲೋ ಕೇಳಿಸುತ್ತಂತೆ ಎಲ್ಲೋ ಕುಣಿದರೆ, ಎಲ್ಲೋ ಕಾಣಿಸುತ್ತಂತೆ—ಕೂತು ಕೂತಲ್ಲೇ, ಊರು ಬಿಟ್ಟು ಊರು ಸೇರಬಹುದಂತೆ. ನಿಂತಸಿತಲ್ಲೇ, ಪಾತಾಳಕ್ಕೆ ಹೋಗಬಹುದಂತೆ. ಇದೇನು ಹುಚ್ಚು ಅಂತೀನಿ.

ನಮ್ಮ ಜೀವನಕ್ಕೆ ಸುಖ ಹಿತ ಆಗೋ ಹಾಗೆ ಒಂದು "ಪ್ಲಾನ್" ಹಾಕಿ ಈ ವಿಜ್ಞಾನಿಗಳು ಕೆಲಸ ಮಾಡಬಾರದೇ ?

ಒಂದು ನೆಲ್ಲಿ— ಧಾರವಾಡದೋರು ಅನ್ನೋ ಹಾಗೆ ಒಂದು ನಳ. ಬಿಸಿ ಬಿಸಿ ಗರಮಾಗರಂ ಕಾಫೀ ಬರೋ ನಳ.—ಅಲ್ಲಾ ನಳಕಾಫಿ ಬರೋ ನೆಲ್ಲಿ!

ಒಂದು ಕಾಸು ಬಿಡೋ ಗಿಡ. ದಿನಾಲೂ ಫಲಾ ಕೊಡೋ ಗಿಡ ಮಳೆ ಇಲ್ಲದೆ ಬೆಳ ಬರೋ ಗಿಡ—

ಒಂದು ಮಸಾಲೆ ದೋಸೆ ಬರೋ ಕಾವಲಿ. ಎಂದರೆ ಗೊತ್ತಾಯ್ತೋ? ದೋಸೆಹಿಟ್ಟು ಅಡುಗೂಲಜ್ಜಿ ಏನೂ ಕೂಡದು. ಅದರ ಪಾಡಿಗೆ ಅದು. ದೋಸೆ ಹಾಕ್ತಾ, ಕೋಡ್ತಾ ಹೋಗಬೇಕು.

ಅಂಗಿ ಬರೋ ಮಿಷನ್ನು—ಬಟ್ಟೆ ಬಂದು, ಅದನ್ನು ಚಿತ್ರವಿಚಿತ್ರವಾಗಿ ಕತ್ತರಿಸಿ ತಿರುಗಿ ಹೊಲಿದು, ಏನು ಅನ್ಯಾಯ! ಏನು ಶ್ರಮ. ಸುಮ್ಮನೆ. ಹತ್ತಿ ಕೊಟ್ಟರೆ ಈ ಕಡೆ ಅಂಗಿ ಬರಬೇಕು. ಷರ್ಟು ಎಂದರೆ ಷರ್ಟು ಬರಬೇಕು. ಜುಬ್ಬಾ ಎಂದರೆ ಜುಬ್ಬಾ !

ಹಾಗೇ. ನಿಂತಲ್ಲೇ ಚೌರ! ಸೋಪು ಕೂಡದು. ನೀರು ಕೂಡದು. ಕತ್ತಿ ಕೂಡದು.

—ಅರರ! ಏನೋ ಯೋಚಿಸ ಹೋದರೆ ಏನೋ ತೋಚುತ್ತಲ್ಲ. ಈಗ ವಿಜ್ಞಾನಿಗಳ ಪ್ರಭಾವದಿಂದ ಈ ಸಮಾಜದಲ್ಲಿ ಎಲ್ಲಿ ನಿಂತರ ಅಲ್ಲೇ ಚೌರ ಅಲ್ಲವೇ? ನೀರೂ ಇಲ್ಲ! ಸೋಪೂ ಬೇಡ !

o

"ವೇಷ ಭೂಷಣ?"

ಸಾಯಂಕಾಲ ಕಛೇರಿಗೆ ಹೋಗುವಾಗ ಹೊಸ ಪಂಚೆ ಉಟ್ಟುಕೊಂಡು ಹೋಗಿದ್ದೆ. ರಜಾ ದಿನ ಸಂಗೀತ ಕಛೇರಿಗೆ ಹೋಗುವಾಗ ಸಿಕ್ಕಿದ್ದೊಂದು ಫೈನ್ ಫಿನ್ಲೆ ಪಂಚೆ ಉಟ್ಟುಕೊಂಡು ಮೆರೀಬೇಕು ಅನ್ನಿಸೋದಿಲ್ಲವೇ? ಸಾಹೇಬರೂ ಬಂದಿರುಲ್ಲ. ನನ್ನ ಪಂಚೆ ನೋಡಿ ಅಸೂಯೇನೂ ಪಡೋದಿಲ್ಲ. ಕಿರುಕುಳ ಕೊಡೋದೂ ಇಲ್ಲ. ಹೀಗಂದುಕೊಂಡು ಸಂಗೀತ ಕಛೇರಿಗೆ ಹೋದರೆ ಕಂಡವರೆಲ್ಲರೂ ಕೇಳೋದೆ "ಏನಯ್ಯಾ ನಿಮ್ಮವರು ಯಾರು ಮಂತ್ರಿಗಳು?"—'ನಿನಗೆ ಬಟ್ಟೆ ಹತೋಟಿ ಇಲಾಖೆಗೆ ವರ್ಗಾ ಆಯಿತೆ?"—"ವರಮಾನ ತೆರಿಗೆ ಇಲಾಖೆಗೆ ಸೇರಿದೆಯಾ"—ಎಂದು.

"ಇಲ್ಲಾ ಕಣಯ್ಯಾ. ಅಮಾವಾಸ್ಯೆ ದಿನ ಕಗ್ಗತ್ತಲಿನಲ್ಲಿ ಮಾರುಕಟ್ಟೆಯಲ್ಲಿ ಕೊಂಡುಕೊಂಡೆ. ನನ್ನ ಹಣ ನಾನೇ ಕೊಟ್ಟು" ಎಂದು ಹೇಳಿದರೂ ಯಾರೂ ನಂಬರು. ಆದರೆ ಎಲ್ಲರಿಗೆ ಒಂದು ರೀತಿಯ ಗೌರವ. ಒಂದು ತೆರನಾದ ಅಸೂಯೆ. ಇದರಿಂದ ಒಂದು ಅನುಕೂಲವೇ ಆಯಿತು. ಸಂಗೀತಗಾರರ ಮುಂದೆಯೇ ಕುಳಿತುಕೊಳ್ಳಲು ಸಾಧ್ಯವಾಯಿತು.

* * *

ಆದರೆ ನೋಡಿ ಮಾರನೆಯ ದಿನ ಪೆಟ್ರೋಲ್ ಕೂಪನ್ ಕೇಳುಕ್ಕೆ ಅಂತ ಈ ಫಿನ್ಲೆ ಪಂಚೆ, ಸಿಲ್ಕ್ ಜುಬ್ಬಾ ಹಾಕಿಕೊಂಡು ಹೋದೆ. "ನಾಸ್ತಿ" ಎಂದೇ ಬಿಟ್ಟರು ಅಲ್ಲಿನವರು ಘಂಟಾಘೋಷವಾಗಿ—ಇದು ಸುಖವಿಲ್ಲ ಅಂತ, ಮರು ದಿನ ಗಾಂಧೀ ಟೋಪಿ, ಗರಿಯಾಗಿ ಇಸ್ತ್ರಿ ಮಾಡಿದ ಖದ್ದರ್ ಜುಬ್ಬ ತೋಳಿನ ಮೇಲೆ ಕಾಣುವಂತೆ ಒಂದು ಚಿಕ್ಕ ಹರುಕಲು, ತ್ರಿವರ್ಣ ಅಂಚಿನ ಕರವಸ್ತ್ರ. ಒಂದು ಬಿಳಿ ಮುಗ್ಗಲು ಹಾಸಿಗೆಯನ್ನೇ ಒಂಟಿ ಕಚ್ಚೆ ಹಾಕಿ ಉಟ್ಟು, ಪಟೇಲ್ ಚಪ್ಪಲಿ ಧರಿಸಿ ಹೋದೆ.

"ಏನು ಬೇಕು "ರಾವ್ ಜೀ" ಎಂದು ಹಸನ್ಮುಖದಿಂದ ಅಧಿಕಾರಿ ಎದುರ್ಗೊಂಡು ಕುರ್ಚಿ ಕೊಟ್ಟ. ಹತ್ತು ಗ್ಯಾಲನ್ ಬೇಕಾಗಿತ್ತು. ಇರಲಿ, ಎಂದು ಇಪ್ಪತ್ತು ಕೇಳಿದೆ. ಬಡವರ ಬೇನೆ ಪರಿಹಾರ ಮಾಡುವವರು ನೀವು ಎಂದು ಮೂವತ್ತು ಕೊಟ್ಟ ಆತ ನಮಸ್ತೇ ಎಂದು ಹೊರಬಿದ್ದೆ-ಕೈಕೈ ಜೋಡಿಸುತ್ತಾ!

* * *


ಅವತ್ತು ಸಂಜೆ ನಮ್ಮ ಮಾವನವರು ಅವರೂರಿಗೆ ಹೋಗಬೇಕಿತ್ತು. ಬೆಳಗ್ಗೇನೇ ಸ್ಟೇಷನ್ನಿಗೆ ಹೋಗಿ ಟಿಕೇಟ್ ಕೊಂಡು, ರಿಸರ್ವ್ ಮಾಡಿಸೋಣ ಅಂತ ಹೊರಟೆ. ನನ್ನ ಟೋಪಿ ನನ್ನ ಜುಬ್ಬ ಏನೇನೂ ಕೆಲಸ ಮಾಡಲಿಲ್ಲ.

ಹತ್ತು ಗಂಟೇಗೆ ಒಬ್ಬ ಕ್ಲಾರ್ಕ್ ಬಂದಿರುತ್ತಾನೆ ಎಂದರು. ಅಯ್ಯೋ! ರಾಮ! ಎಂದು ಹಿಂತಿರುಗಿ ಮನೆಗೆ ಬಂದು, ಒಂದು ಟ್ವೀಡ್ ಸೂಟ್, ಒಂದು ರಂಗಾ ರಂಗಿ ಅಮೆರಿಕನ್ ಟೈ ಕಟ್ಟಿಕೊಂಡು, ಪೇಟೆಂಟ್ ಲೆದರ್ ಷೂ ಹಾಕಿಕೊಂಡು ತಿರುಗಿ ಒಂಭತ್ತಕ್ಕೇ ಹೋದೆ. ಮೊದಲಲ್ಲಿದ್ದವನೇ, "ಗುಡ್ ಮಾರ್ನಿಂಗ್" ಅಂದ. ಇಂಗ್ಲೀಷಿನಲ್ಲಿಯೇ ವ್ಯವಹಾರ ನಡೆಸಿದೆ. ಮೂರೇ ನಿಮಿಷದಲ್ಲಿ ನನ್ನ ಕೆಲಸ ಆಯ್ತು.

• • •

ಹಾಗೆ ನೋಡಿ, ಈಗ ಪೋಲೀಸ್ ಸ್ಟೇಷನ್ನಿಗೆ ಹೋಗಿ ಯಾರಿಗಾದರೂ ಫೋನ್ ಮಾಡಬೇಕಾದರೆ, ಖಾಕಿ ಷಾರ್ಟ್ಸ್, ಬುಷ್ ಕೋಟೇ ಹಾಕಿಕೊಂಡು ಹೋಗ್ತೇನೆ. ಇಂಗ್ಲೀಷ್ ಔಷಧಾಲಯಕ್ಕೆ ಹೋದರೆ, ಇನ್ನೂ ಸೂಟು ಅಥವಾ ಬುಷ್ ಕೋಟೇ ಗತಿ. ಯುನಾನಿ ದವಾಖಾನೆಗೆ— ಅಲ್ಲಿಗೂ ಕೆಲವು ಸಂದರ್ಭದಲ್ಲಿ ಹೋಗಬೇಕಾಗುತ್ತೆ—ಇಜಾರ ಚಡಾವು ಉರ್ದು—ಹಸೀ ಸಾಹಿತಿಗಳ ಸಮ್ಮೇಳನಕ್ಕೆ ಹರಿದ ಅಂಗಿ, ಜೂಲು ಪಂಚೇಲಿ ಷರಾಯಿ ಹೊಲಿಸಿ, ಮೂರು ದಿನ ಚೌರ ಇಲ್ಲದೆ ಹೋಗೋದು—ಇತ್ಯಾದಿ ಇತ್ಯಾದಿ ವೇಷ ಹಾಕಬೇಕಾಗುತ್ತೆ.

ಅಲ್ಲಾ! ಇಷ್ಟೆಲ್ಲಾ ಅನುಭವಿಸಿದ ಮೇಲೆ ವೇಷ ಭೂಷಣ ಅಲ್ಲವೇ? ನೀವೇ ಹೇಳಿ.



" ಕಾಮನ್‌ವೆಲ್ತ್ ರಥದಲ್ಲಿ ನಮ್ಮ ಕುದುರೆ "

ಕುದುರೆ ಜೂಜು ಗಾದೆಗಳು

— ೧ —

ಹಾಯಾಗಿದ್ದವನು ಹೈ ಹೈ ಅಂತ ಷುರುಮಾಡಿಬಿಟ್ಟ

ಓಡಲಾರದ ಕುದುರೆಗೆ ಲಾಳವೇ ಭಾರ

ಬಾಜಿ ಕಟ್ಟೋ ಮೋಜಿನಲ್ಲಿ ಬೀಡಿ ಸೇದೋಕೆ ಕಾಸಿಲ್ಲ

ರೇಸ್ ಬುಕ್ ಹಿಂಡಿದರೆ ರೇಷನ್ ಅಕ್ಕಿ ಬೀಳುತ್ತದೆಯೆ ?

ಕುದುರೆ ದಾಟಿ ಕುದುರೆ ಓಡಿದರೆ, ಕೋಣನ ಕಾಸು ಜಾಣ ತಿಂದ

ಕಲ್ಕತ್ತಾದಲ್ಲಿ ಕುದುರೆ ಮನೋ ವೇಗ ; ಬೆಂಗಳೂರಲ್ಲಿ ದನೋವೇಗ.

ಮಕ್ಕಳು ಉಣ್ಣುವ ಕಾಲಕ್ಕೆ ಅಪ್ಪನಿಗೆ ರೇಸ್ ರೋಗ ಬಂತು

ತಬೇಲಿ ನಂಬಿದವ ತಬ್ಬಲಿಯಾದ

ಬುಕ್ಕಿ ಹತ್ರ ದುಃಖ ಹೇಳಿಕೊಂಡು ಬಿಕ್ಕಿ ಬಿಕ್ಕಿ ಅತ್ತ

ಶ್ರೀಮಂತರ ಬಾಲ ಹಿಡಿದು ಶೀಲವಂತರ ಮಾನ ಹೋಯಿತು

ವಿಕ್ರಮಾದಿತ್ಯ ಅಶ್ವಮೇಧ ಮಾಡಿದ: ಅಕ್ರಮಾದಿತ್ಯ ಕುದುರೆ ಜೂಜಿಟ್ಟ

ಹೊಟ್ಟೆಗೆ ಹಿಟ್ಟಿಲ್ಲ; ಜುಟ್ಟಿಗೆ ಜೂಜಿನ ಚೀಟಿ.

ಬೆರಳು ಕಚ್ಚಿಕೊಂಡರೆ, ಕುದುರೆ ಕೊರಳು ಉದ್ದವಾಗುತ್ತದೆಯೆ ?

ಗೆದ್ದ ಕುದುರೆ ಲದ್ದಿ ಮೂಸು.

ಗೆದ್ದರೆ ಹಮಾರಾ ಗೋಡಾ ! ಸೋತರೆ, ನಾಶವಾ ಘೋಡಾ !

ಕಾವೇರಿಯಲ್ಲಿ ಮಿಂದರೂ ಕಾಶಿಯಲ್ಲಿ ಮಿಂದರೂ, ಕುದುರೆನಾತ ಹೋಗೋದಿಲ್ಲ.

ಪಾಪಿ ಪಣ ತೊಟ್ಟರೆ, ಮೊಣಕಾಲೇ ಮುರಿಯುತ್ತೆ, ಕುದುರೆಗೆ.

ಭಂಡರ ಬಡಾಯಿ ಕೇಳಿ ಬಂಡವಾಳ ಕಳೆದುಕೊಂಡ.

ಗಾಂಧಿ ಇರಲಿ, ಗಾಂಧಿ ಹೋಗಲಿ, ಭ್ರಾಂತಿ ಮಾತ್ರ ಖಾತ್ರಿ.

— ೦ —

ಕನ್ನಡ ವ್ಯಾಕರಣ ಪ್ರಶ್ನ ಪತ್ರಿಕೆ

೧. ಕರ್ಣಾಟಕ ಭಾಷೆಯಲ್ಲಿ ಮಾತ್ರವೇ ಇರುವ ವರ್ಣಗಳು ಯಾವುವು ?

ಕರ್ಣ, ಸುವರ್ಣ

೨. ಸಂಧಿ ಎಂದರೆ ಏನು ? ಸಂಧಿ ಮಾಡುವುದೇತಕ್ಕೆ ?

ಒಂದು ಸೋಲಿನ ಮುಂದೆ ಮತ್ತೊಂದು ಸೋಲು ಬಂದಾಗ, ಸುಸ್ತಾಗಿ ಸಂಧಿಮಾಡಿಕೊಳ್ಳುವರು , ಸಂಧಿ ಮಾಡಿಕೊಳ್ಳುವುದರಿಂದ, ಮುಂದಿನ ಯುದ್ಧಕ್ಕೆ ತಾಕತ್ ಪಡೆಯಲವಕಾಶ.

೩. ನಾವು ರೂಢಿ ಕೆಡುವುದೆಂದರೆ ಏನು ?

ಪಕ್ಕದ ಬಿಳಿ ಗೆರೆಗಳೆರಡೂ ಲುಪ್ತವಾಗಿ, ಕೇವಲ ನಡುವಣ ಕೆಂಪು ಗೆರೆ ಮಾತ್ರ ಉಳಿಯುವುದು.

೪. ಸಂಸ್ಕೃತ ಶಬ್ದ ಸಂಧಿಗಳನ್ನು ಕನ್ನಡ ವ್ಯಾಕರಣದಲ್ಲಿ ವಿವರಿಸಲು ಕಾರಣವೇನು ?

ಹುಡುಗರೆಲ್ಲಿ ಒಗ್ಗಟ್ಟು ಮೂಡಿ, ಅವರು ಈ ಹಿಂಸೆಯನ್ನು ಪ್ರತಿಭಟಿಸದೆ ಇರುವುದರಿಂದ.

೫. ಕನ್ನಡ ಭಾಷೆಯಲ್ಲಿ ಬರುವ ಮೂರು ತರದ ಶಬ್ದಗಳಾವುವು ?

ಅಸಭ್ಯ, ಅಸಹ್ಯ, ಅಶ್ಲೀಲ.

೬. ಒಂದೊಂದು ಶಬ್ದವು ಅನೇಕ ಲಿಂಗಗಳಲ್ಲಿ ಬರಬಹುದು. ಅಂತಹ ಶಬ್ದಗಳನ್ನು ಉದಾಹರಿಸಿ

ಥತ್, ಥೆ, ಊ, ಹೋ.

೭. ಏಕವಚನಕ್ಕೆ ಬಹುವಚನವೂ, ಬಹುವಚನಕ್ಕೆ ಏಕವಚನವೂ ಯಾವಾಗ ಬರುವುವು ?

ಸ್ತೋತ್ರ ಮಾಡಬೇಕಾದಾಗ , ಕೋಪ ಬಂದಾಗ.

೮. ಗದಬಗಳು ಯಾವಾಗ ಏತಕ್ಕೆ ಬರುವುವು ?

ವಾಳು ಗೋಡೆಗಳಿದ್ದಾಗ.

೯. ದ್ವಿರುಕ್ತಿ ಎಂದರೆ ಏನು ?

ರಾಜಕೀಯ ಭಾಷಣ.

೧೦. ಉತ್ತಮ, ಮಧ್ಯಮ ಪುರುಷರೆಂದರೇನು ?

ಭಾಷಣ ಮಾಡದಿರುವವರು, ಭಾಷಣ ಕೇಳುವವರು.

ನೂತನ ಇತಿಹಾಸ

"ಪಾಕಿಸ್ತಾನದಲ್ಲಿ ನೂತನ ಇತಿಹಾಸ ಪುಸ್ತಕಗಳನ್ನು ತಯಾರಿಸಲಾಗುವುದೆಂದೂ ಹಳೆಯ ಚರಿತ್ರೆ ಪುಸ್ತಕಗಳನ್ನು ಯಾರೂ ಕೊಂಡುಕೊಳ್ಳಕೂಡದೆಂದೂ ಆಜ್ಞೆಯಾಗಿದೆ" (ಕರಾಚಿ ಸುದ್ದಿ)

ಅಲ್ಲಿಯ ನೂತನ ಇತಿಹಾಸದ ಮಾದರಿಪ್ಯಾರಾ ಒಂದನ್ನು ಇಲ್ಲಿ ಕೊಡಲಾಗಿದೆ :

ಪಾಕಿಸ್ತಾನ ಎರಡು ಭಾಗವಾಗಿದ್ದರೂ, ಒಂದೇ. ಅವೆರಡರ ಮಧ್ಯೆ ಒಂದು ದೊಡ್ಡ ಗೊಂಡಾರಣ್ಯವೂ, ಮರಳುಗಾಡೂ ಇರುವುವು. ಪಾಕಿಸ್ತಾನ ಇಸ್ಲಾಂ ಶಕೆ ೧೩೧೫ರಲ್ಲಿ ಸ್ಥಾಪನೆಯಾದರೂ, ಅದು ಪುರಾತನ ಪುಣ್ಯಭೂಮಿ. ಅದರ ಚರಿತ್ರೆ ಜಿನ್ನಾರ ಜನನದವರೆಗೂ, ಏಕೆ, ಗಜನಿ ಮಹಮ್ಮದನ ಏಕಾದಶ ಧರ್ಮ ಯಾತ್ರೆಗಳವರೆಗೂ ಹೋಗುತ್ತದೆ. ಆ ಧರ್ಮಯಾತ್ರೆಯವರೆಗೂ ಈ ಪ್ರದೇಶದಲ್ಲಿ ನ್ಯಾಯ, ನೀತಿ, ಸುಖ, ಸಂಪತ್ತು, ಯಾವುದೂ ಇರಲಿಲ್ಲ. ಪೂರ್ವ ಬಂಗಾಳದಲ್ಲೂ ಪಶ್ಚಿಮ ಪಾಕಿಸ್ತಾನದಲ್ಲೂ ಅದುವರೆಗೆ ಇದ್ದ ಪ್ರಾಣಿಗಳನ್ನು ಮನುಷ್ಯರೆಂದು ಹೇಳಲು ಪಾಕಿಸ್ತಾನಿ ಚರಿತ್ರೆಕಾರರು ಹಿಂಜರಿಯುವುದು ಸಮಂಜಸವಾಗಿಯೇ ಇದೆ. ಆದರೆ, ಅರಬೀ ದೇಶದಿಂದ ಸದ್ಧರ್ಮ ವಾಹಿನಿ ಪ್ರವಹಿಸಿದಾಗ, ಕಾಶ್ಮೀರದ ಮಂಜು ಕರಗಿತು ; ಬೆಟ್ಟಗಳ ಮೇಲಿಂದ ನೀರು ಜಗುಳಿತು. ಪಾಕಿಸ್ತಾನದ ಪಂಚನದಿಗಳೂ ಅರಬೀ ಸಾಗರವನ್ನರಸುತ್ತ ಓಡಿದುವು. ಸೂರ್ಯ ಚಂದ್ರರು ಈ ಭೂಭಾಗದಲ್ಲೂ ಪ್ರಕಾಶಿಸಲು ನಿಶ್ಚಯಿಸಿದುವು.

ಮನೆಯಾಕೆ ಮಾತೂಂದ್ರೆ ?!

ಮನೆಯಾಕೆ ಮಾತೂಂದ್ರೆ . ,
ನನ್ಕತ್ತು ಹಿಸುಕಿದ್ಹಾಂಗೇ ,—
ಅಲ್ಲ, ಮುತ್ತಿನಂಥ ಮಾತು, ಅಂತಂದೆ !

ಮದುವೆಯಾದ ಮೂರು ವಾರ
ನನ್ಮನೋರಮೆ ಮಾತು
ಬಲು ಇಂಪು, ಬಲು ನೊಂಪು !
ಮುತ್ತಿನಂಥಾ ಮಾತು , ಮುತ್ತು ಕೊಟ್ಟೇ ಮಾತು !
ಮೈಯೆಲ್ಲಾ ಜುಂ !!
ಬರ್ ಬರ್ತಾ, ಒರ್ ಬರ್ತಾ, ಅದೇಕೋ, ಅದೇನೋ,
ನನ್ಮಡದಿ ಮಾತು ಅಂದ್ರೆ ..,
ಒಲು ಮಾತು, ಅತೀ ಮಾತು,
ನಾನ್ಮಾತ್ರ ಬಾಯ್ಬಿಡದೆ, ಬದ್ಲಿಲ್ದೆ, ಗುಂ !!

ಸುಮ್ನಿದ್ರೂ ಬಿಡ್ಲೊಳ್ಳ
ನನ್ಮಡದಿ,- ಯಜಮಾನಿ !
"ಅದ್ಯಾಕೆ ? ಇದ್ಯಾಕೆ ? ಎಲ್ಲಿದ್ರಿ ? ಯಾಕೆ ಹೊತ್ತು ?
ನಾನ್ಯಾಕೆ ? ಮನೆಯಾಕೆ ? ಕ್ಲಬ್ಬಿದ್ರೆ ಸಾಕು ನಿಮಗೆ ?"
ಅಂತಂದ್ರೆ ನನ್ನಾಕೆ,
ನನ್ಕತ್ತು ಹಿಸುಕಿದ್ಹಾಂಗೇ !

ಯಾಕಂದ್ರೆ, ಬಾಯ್ಬಿಟ್ರೆ
ನಾನೆಲ್ಲಿ ಹೇಳೋದು ಬರಿಸುಳ್ಳೇ !!
ಸುಳ್ಳೇಳಿ ಸಿಕ್ಕಿದ್ರೆ ಬಿಟ್ಟಾಳೆ ಯಜಮಾನಿ ?
ಸುಮ್ನಿದ್ರೆ ಬಿಟ್ಟಾಳೆ ? !!

ಅವಕಾಗಿ ಅದಕಾಗಿ ನಾನಂದಿ
ಮನೆಯಾಕ ಮಾತೊಂದ್ರ
ಕತ್ತು ಹಿಸುಕಿದ್ಹಾಂಗೇಂತ,—

ಅಲ್ಲ, ಮುತ್ತಿನಂಥ ಚಿನ್ನದಂಥ
ರತ್ನದಂಥಾ ಮಾತೊಂತ !!
ಏನಂದ್ರು, ಹೇಗಂದ್ರು, ನನ್ನ ಜವಾನಿ ತಾನೆ !
ಆ ಮಾತೆಲ್ಲ ನನಗೇನೊ ಬಲು ಇಂಪು, ಅತಿ ಸೊಂಪು !!
(ಅಂತ ನಾನು ಹೇಳ್ದಿದ್ರೆ ವಿಧಿ ಇಲ್ಲ !!!)

— ಬಾಳ್ಯ.

"ಅಧಿಕಾರ ಲಾಲಸೆ ತೊರೆಯಿರಿ"—"ಅಧಿಕಾರ ಮೋಹ ತ್ಯಜಿಸಿರಿ" ಎಂದು ಅಧಿಕಾರದಲ್ಲಿರುವವರು ಮಾತ್ರ ಹೇಳುತ್ತಾರೆ.—ಯಾಕೆ? ಮಿಕ್ಕವರು ಹೇಳುಲ್ಲ.

• • •

ಡೆಲ್ಲಿ ಆಹಾರ ಸಮ್ಮೇಳನಕ್ಕೆ
ತೆಳ್ಳಗಿರೋ ಮಂತ್ರಿಗಳನ್ನೇ ಕಳಿಸಿದರೆ ಚೆನ್ನ. ಅಲ್ಲವೇ !

• • •

ಮೈಸೂರಿನ "ಸೇಲ್ಸ್ ಟ್ಯಾಕ್ಸ್" ಮದ್ರಾಸ್ ಮಾದರಿಯದು.
ಮೈಸೂರಿನ "ಆಡಳಿತ ವ್ಯವಸ್ಥೆ" ಮದ್ರಾಸಿನಂತೆಯೇ. (ಪತ್ರಿಕೆ)
— ಮೈಸೂರಿನ ಮಂತ್ರಿ ಮಂಡಳ ?

• • •

ಅಂದು ರಾಜಾಧಿರಾಜ ಶ್ರೀ ರಾಮಚಂದ್ರ ಅರಣ್ಯವಾಸಕ್ಕೆ ಹೋದನಂತೆ —ಭರತನಿಗೆ ರಾಜ್ಯ ಬಿಟ್ಟು

—ಇಂದು ರಾಜಾಧಿರಾಜರು ಅರಣ್ಯಕ್ಕೆ ಶಿಕಾರಿಗೆ ಹೋಗುತ್ತಾರಂತೆ ಭರತಖಂಡಕ್ಕೆ ರಾಜ್ಯ ಬಿಟ್ಟು—

• • •

★|| ಒಂದು ಸಲಹೆ ||★

— o —

ಜನರ ಕಿಸೆಯಲ್ಲಿ ನೋಟುಗಳು ತುಂಬಿವೆ; ಈಚೆಗೆ ಬರುತ್ತಿಲ್ಲ. ಆದ್ದರಿಂದ, ಹಣದ ಮಾರ್ಕೆಟ್ ಬಿಗಿಯಾಗಿದೆ. ಎಂದು ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿ ಡಾ|| ಜಾನ್ ಮಥೈ ಗೊಣಗುತ್ತಿದಾರೆ, ಬ್ಯಾಂಕ್ ಮ್ಯಾನೇಜರುಗಳೂ ಬೊಮ್ಮಡಿ ಪ್ರಾರಂಭಿಸಿದಾರ ಆ ನೋಟುಗಳನ್ನು ಮತ್ತೆ ಸರ್ಕಾರದ ಬೊಕ್ಕಸಕ್ಕೆ ಎಳೆದುಕೊಳ್ಳಲು—ಇದೊಂದು ಸಲಹೆ. ಇದನ್ನು ಯಾವ ಸರ್ಕಾರ ಬೇಕಾದರೂ, ಉಚಿತವಾಗಿ, ಪ್ರತಿಫಲವಿಲ್ಲದೆ, ಏಕೆ, ಕೃತಜ್ಞತೆಯ ಕಾಟವೂ ಇಲ್ಲದೆ, ಉಪಯೋಗಿಸಿಕೊಳ್ಳಬಹುದು. ನಮ್ಮ ಅಭ್ಯಂತರವೇನೂ ಇಲ್ಲ .. ...

ಸರ್ಕಾರಿ ನೌಕರಿ ಎಂದರೆ, ಜನ ಬಾಯಿಬಿಡುವ ಕಾಲ ಇದು. ಮಾನ ಮರ್ಯಾದೆ ಎಲ್ಲವನ್ನೂ ತೊರೆದು, ಕಚೇರಿ ಬಾಗಿಲು ಕಾದು, ಸಾಹೇಬರುಗಳ ಮನೆಗಳಿಗೆ ಅಲೆದು, ಹೂವು ಹಣ್ಣು ಒಪ್ಪಿಸಿ, ಅವರ ನಂಟರಿಷ್ಟರ ಕಾಲು ಕಟ್ಟಿ, ಕುತಂತ್ರ ಕುಹಕ ಅನುಸರಿಸಿ, ಕುಲ ಗೋತ್ರ ಮುಂದು ಮಾಡಿ, ಚಾಡಿ ಚಾಣಕ್ಯ ಚಲಾಯಿಸಿ, ನೌಕರಿ ಲಪಟಾಯಿಸುವ ಕಾಲ, ಇದು. ನೌಕರಿಗಳೂ ಕೂಡ, ದಿನೇ ದಿನೇ ಸಂಖ್ಯೆಯಲ್ಲೂ, ಅನುಕೂಲಗಳಲ್ಲೂ, ಹೆಚ್ಚುತ್ತಿವೆ.

ನಮಗೆ ಬೇಕಾದವರಿಗೆ, ಬೇಕಾದ ಹಾಗೆ, ನೌಕರಿಗಳನ್ನು ಕೊಡಿಸಿ, ಮನೆ ಉದ್ಧಾರ ಮಾಡೋಣ. ಆದರೆ, ಹಾಗೆ ಮಾಡುವ ಮೊದಲು, ಜಾಹಿರಾತು ಹೊರಡಿಸಿ, ಅರ್ಜಿಗಳನ್ನು ತರಿಸಿ, ನ್ಯಾಯ ನೀತಿ ಧರ್ಮಗಳ ಸೋಗು ಹಾಕೋಣ. ಅದರಲ್ಲಿ ತಪ್ಪೇನಿದೆ? ಜಾಹಿರಾತುಗಳು ಮಾತ್ರ ಈ ರೀತಿ ಇರಲಿ: "೨೫ ರೂ. ಸಂಬಳ! ೨೦ ರೂ. ತುಟ್ಟಿ ಭತ್ಯ; ಇತರ ಬಿಟ್ಟಿ ಸೌಲಭ್ಯಗಳು. ಟೆಂಪರರಿ. ೧೨ ತಿಂಗಳು ಮಾತ್ರ. ೧೦ ರೂ. ಟ್ರೆಜರಿ ರಶೀತಿಯೊಂದಿಗೆ ಅರ್ಜಿಗಳನ್ನು ಕಳುಹಿಸಿರಿ," ಎಂದು. ಇದನ್ನು ನೋಡುತ್ತಲೂ, ಸುಮಾರು ನಾಲ್ಕು ಸಾವಿರ ಜನಗಳಾದರೂ, ಅರ್ಜಿ ಕಳುಹಿಸಿಯೇ ಕಳುಹಿಸುತ್ತಾರೆ. ಇಪ್ಪತ್ತು ಸಾವಿರ ಸರ್ಕಾರಕ್ಕೆ ಬಂತು. ಅರ್ಜಿಗಳನ್ನು ಅಜಮಾಯಿಷಿ ಮಾಡುವ ಸಿಬ್ಬಂದಿ ಖರ್ಚು, ಅಚ್ಚಿನ ವೆಚ್ಚ, ಕಾಗದದ ಬೆಲೆ, ಇತ್ಯಾದಿಗೆ ೪ ಸಾವಿರದ ತನಕವಾದರೂ, ಉಳಿದ ೧೬ ಸಾವಿರದಲ್ಲಿ ಆ ನೌಕರೀದಾರನಿಗೆ ಕೊಡುವ ೫೪೦ ಜಾತಾ, ೧೫,೪೬೦ ರೂ. ಬಾಕಿ. ಯಾರ ಮನೆ ಕೆಡಿಸಿತು? ಒಂದೇ ಒಂದು ಜುಜುಬಿ ಚಾಕರಿಗೆ ಇಷ್ಟು ವರಮಾನವಾದರೆ, ಸರ್ಕಾರದ ಹಂಚಿಕೆಯಲ್ಲಿರುವ ಸುಮಾರು ೩ ಲಕ್ಷ ಕೆಲಸಗಳಿಗೆ ಒಟ್ಟು ವರ್ಷೇ ವರ್ಷೇ ೪೬

ಕೋಟಿ ೩೮ ಲಕ್ಷ ರೂಪಾಯಿ ಲಪಟಾಯಿಸಿಬಿಡಬಹುದು. ಹಣದ ಉಬ್ಬರವೂ ಇಳಿಯುತ್ತದೆ; ದೇಶ ಆರೋಗ್ಯವಾಗಿರುತ್ತದೆ. ಜಾಹಿರಾತುಗಳ ಮೂಲಕವೇ ನೌಕರರನ್ನು ಆರಿಸುತ್ತಿದೇವೆ, ಎಂಬ ರಾಮರಾಜ್ಯ ಕೀರ್ತಿ ಸರ್ಕಾರಕ್ಕೂ ಲಭಿಸುತ್ತದೆ.

ಇನ್ನೂ ಹೆಚ್ಚು ಸಂಬಳ ಸಾರಿಗೆಗಳನ್ನು ಕೊಡುತ್ತಿನ್ನುವ ನೌಕರಿಗಳಿಗೆ, ಅರ್ಜಿ ಹಣವನ್ನು ೫೦, ೧೦೦, ೫೦೦ ಅಂತ ಏರಿಸುತ್ತಾ ಹೋಗಬಹುದು. ಅಲ್ಲದೆ, ಒಂದೊಂದು ಸಲವೂ ೧೦೦, ೨೦೦ ಜನರನ್ನು ಖುದ್ದಾಗಿ ನೋಡಿ ಮುಖತಃ ಪ್ರಶ್ನಿಸಿ ಆರಿಸುವ ಉತ್ತಮೋತ್ತಮ ಪದ್ಧತಿಯನ್ನನುಸರಿಸಿದರೆ, ರೈಲ್ವೆ ಇಲಾಖೆಯ ವರಮಾನ, ಹೋಟೆಲ್ ಮಾಲೀಕರ ಆದಾಯ ತೆರಿಗೆ, ಇತ್ಯಾದಿ ಬಾಬ್ತುಗಳೂ ಅಧಿಕರಿಸುತ್ತವೆ. ಸಾವಿರಾರು ರೂ. ಖರ್ಚುಮಾಡಿ ತಾಯಿ ತಂದೆಯರೂ, ಅತ್ತೆ ಮಾವಂದಿರೂ ಮಕ್ಕಳನ್ನು ಓದಿಸುತ್ತಿರುವಾಗ, ಅರ್ಜಿಗಳಿಗಾಗಿ ನೂರಾರು ರೂ. ತೆರುವುದಕ್ಕೆ ಅವರು ಹಿಂಜರಿಯುವಂತಿಲ್ಲ.

ಯಾವ ಅಧಿಕಾರವನ್ನಾದರೂ, ಯಾರು ಬೇಕಾದರೂ, ಚಲಾಯಿಸಬಹುದೆಂಬ ಶುದ್ಧ ಪ್ರಜಾಸತ್ತೆಯ ತತ್ವ ಜಾರಿಗೆ ಬಂದಷ್ಟೂ, ನೌಕರಿಗಳಿಗೆ ಬೇಕಾದ ವಿದ್ಯೆಯ ಮಟ್ಟವನ್ನಿಳಿಸಿ, ಉಮೇದುವಾರ ಸಂಖ್ಯೆಯನ್ನು ಹೆಚ್ಚಿಸಿ, ಅರ್ಜಿ ಹಣವನ್ನು ಇನ್ನೂ ತುಂತುಂಬ ಪಡೆಯಬಹುದು. —**ರೇವಣ್ಣ.**

—o—

ಏಕೀಕರಣ

(ಕಾಂಬೋದಿರಾಗ.... ತ್ರಿಪುಟ ತಾಳ)

ಕನ್ನಡ ನಾಡು ಕಣ್ಣಮುಂದೆ ನಿಂತಿದಂತಿದೆ ॥ ಪ ॥
ಮಸ್ತಕದಲಿ ಮೈಸೂರು ಕಿರೀಟ
ಪಂಢರ ಪುರದಿಂದೆಸೆವ ಲಲಾಟ ॥
ಹಸ್ತದಲಿ ಹೊಳಲು ನೂರರ ಓರೆ ನೋಟ
ಭಟ್ಕಲ ಎಡಬಲದಲಿ ಓಡ್ಯಾಟ
ಘಮ ಘಮಿಸುವ ಗಂಧದ ವನಮಾಲೆ
ತುಂಗೆ ಭದ್ರೆ ಧನದಾಲಯ ಲೀಲೆ ॥
ಮಂ–ಬೆಂಗಳೂರುಗಳಿಟ್ಟ ಬೆರಳು
ಸೊಗಸಿನ ಬೇಲೂರ್ ತಾವರೆ ಅರಳು
ಕೊಡಗು ಬಾಬಾಬುಡ ಶೀತಳ ಕಿರಣ
ಕೋಲಾರದ ಚಿನ್ನದ ನಿಖಿಲಾಭರಣ ॥
ಗದಗುನೂಪುರ ಹಂಪೆಯನಿಟ್ಟ ಚರಣ
ಸರದಾರ ಶ್ರೀ ಪಟೆಲೀಶನ ಕರುಣ ॥ —**ಧುರಂಧರ.**

ಡಾ|| ಡಾಮೋದರಂರ ಗೆಳೆಯ

— o — —

ವಿಜ್ಞಾನ ಪ್ರಪಂಚದಲ್ಲಿ ವಿಹರಿಸುತ್ತಿದ್ದ ಡಾ|| ಡಾಮೋದರಂಗೆ ಐಹಿಕ ಹಾಗೂ ದೈಹಿಕ ಹವ್ಯಾಸಗಳು ಮೆದುಳಿನ ತನಕ ಹತ್ತುತ್ತಲೇ ಇರಲಿಲ್ಲ. ಸಂಬಳ ದಲ್ಲಿ ಬಿದ್ದು ಒದ್ದಾಡುವ ನೌಕರಿಯು ನೊಣಗಳಂತೆ, ಅವರು ಗ್ರೇಡು ತುಟ್ಟಿ ಭತ್ಯ ಅಲೋಯನ್ಸು ಟಿ.ಎ., ಡಿ.ಎ., ಸಪ್ರೋಟೈಂ, ಮಾಮೂಲು, ಆಫೀಸ್ ಜವಾನ ಎಂಬ ಜಮಾಗಳನ್ನಾಗಲಿ, ಬೆಲೆ ಬಾಡಿಗೆ ಬಡ್ಡಿ ಲಾಭ ಮೊದಲಾದ ಖರ್ಚುಗಳನ್ನಾಗಲಿ ಪರಿಗಣಿಸುತ್ತಿರಲಿಲ್ಲ. ಅವರಿಗೆ ಬೇಕಾದದ್ದು ಶೋಧೆ, ಶೋಧನೆ, ಸಂಶೋಧನೆ, ಪುನಃ ಸಂಶೋಧನೆ, ಯಂತ್ರಗಳ ನಿರ್ಮಾಣ; ಹೊಸ ವಿಧಾನ; ಮಾನವನ ಶ್ರಮ ನಿವಾರಣೆ; ಸುಲಭೋಪಕರಣ ಸೃಷ್ಟಿ; ಭಾರತದಲ್ಲಿ ಆಧುನಿಕ ಅಮೇರಿಕದ ಸ್ಥಾಪನೆ.

ಶ್ರೀಮಂತರ ಅನುಗ್ರಹದಿಂದ, ಅವರಿಗೆ ಅನುಕೂಲವಾದ ಸಂಶೋಧನಾ ಲಯವೂ, ಸಂಪದ್ವಿನ್ಯಾಸವೂ, ಲಭಿಸಿತು. ಆ ಕಟ್ಟಡದ ಪಕ್ಕದಲ್ಲೇ ಅವರ ವಾಸದ ಮನೆಯೂ ಇತ್ತು. ಆದರೂ, ಅವರು ತಮ್ಮ ಲಾಬರೇಟರಿಯಲ್ಲೇ ಲಂಗುಲಗಾಮಿಲ್ಲದೆ ಜೀವನ ನಡೆಸಿದರು. ಉಡುಪಿ ಪಾಕವಿದ್ಯಾಲಯದಲ್ಲಿ ಪ್ರವೀಣನಾಗಿದ್ದ ಮುಖ್ಯಪ್ರಾಣ ಎಂಬ ಒಬ್ಬ ವೃದ್ಧ ಅವರ ಅಡಿಗೆಯವನಾಗಿ ಬಂದು ಸೇರಿಕೊಂಡ. ಮುಖ್ಯಪ್ರಾಣನೇ ಡಾ||ರ ಪಂಚಪ್ರಾಣಗಳನ್ನೂ ಪಂಜರ ದಲ್ಲಿ ಉಳಿಸಿದ್ದು. ಅವನನ್ನು ಭಾವೀಭಾರತ ಎಷ್ಟು ವಂದಿಸಿದರೂ ಸಾಲದು. ಕೊರವಂಜಿಯ ವಾಚಕರೂ ಅವನಿಗೆ ಚಿರರುಣಿಗಳು. ಅನೇಕ ತಿಂಗಳುಗಳಲ್ಲಿ ಅವನಿಗೆ ಸಂಬಳ ಕೊಡುವುದನ್ನೇ ಡಾ|| ಮರೆತರು. ಆದರೂ ಮುಖ್ಯಪ್ರಾಣ ಮಾತ್ರ ಡಾ||ನ್ನು ಬಿಟ್ಟು ಹೋಗಲಿಲ್ಲ.

ಡಾ||ರು ಅಮೇರಿಕಕ್ಕೆ ಹೋಗುವ ಮೊದಲು ಸರಳ ಜೀವಿ; ಸರಳಳನ್ನು ಮದುವೆಯಾಗಿ, ಎರಡು ವರ್ಷ ಒದ್ದಾಡುವುದರೊಳಗೆ ಅವರಿಗೆ ಸಮುದ್ರದಾಚೆ ಯಿಂದ ಕರೆ ಬಂತು. ಅವರು ಹಡಗು ಹತ್ತುತ್ತಲೂ, ಸರಳಳಿಗೂ ಕರೆಬಂತು. ಅಲ್ಲಿಂದ ಬಂದ ಮೇಲೆ, ಡಾ||ರು ಸರಳಳನ್ನು ಮರೆತರೂ, ಸರಳವಾಗಿ ಬಾಳುವು ದನ್ನು ಮಾತ್ರ ತೊರೆಯಲಿಲ್ಲ.

ಡಾ|| ಡಾಮೋದರಂ ಸುಮಾರು ಐನ್‌ಸ್ಟೀನ್‌ನಂತೆಯೇ, ತಲೆ ಬಾಚುವು ದನ್ನು ತ್ಯಜಿಸಿದ್ದರು. ರಾಮನ್ ಹಾಗೆಯೇ ಅವರೂ ಜರಿ ಕಲಾಫತ್‌ಗಳನ್ನು

ತೊರೆದಿದ್ದರು; ಪಿ.ಸಿ.ರೇ ಅಂತೆಯೇ, ಅವರ ಅಂಗಿಗೂ ಗುಂಡಿಗಳಿರಲಿಲ್ಲ. ಜಗದೀಶ ಚಂದ್ರಬೋಸರಂತೆ, ಅವರೂ ಕನ್ನಡಕವನ್ನು ಧರಿಸಿದ್ದರು. ಆದರೆ ಬೋಸರಿಗಿಂತ, ಡಾ|| ಡಾ. ಒಂದು ಕೈ ಮೇಲು. ಕನ್ನಡಕವನ್ನು ಹೊತ್ತಿದ್ದರು, ಡಾ|| ತವರಿಂದ ಯಾವುದನ್ನೂ ನೋಡಲಿಲ್ಲ. ಅದರ ಮೂಲಕ, ಸದಾ ಹೊರ ಪ್ರಪಂಚವನ್ನು ನೋಡುತ್ತಿದ್ದರೆ, ದೃಷ್ಟಿಯ ರಶ್ಮಿಗಳು ಗಾಜಿನ ಮೂಲಕ ಹಾದು ಗಾಜು ತೇಮುಹೋಗುತ್ತವೆ ಎಂಬುದು ಅವರ ಮತ. ಆದ್ದರಿಂದ, ಅವರು ಆ ಕನ್ನಡಕವನ್ನು ಎತ್ತಿ ಹಣೆಯ ಮೇಲುಭಾಗಕ್ಕೇರಿಸಿದ್ದರು.

ಡಾ||ಗೆ ಸ್ನೇಹಿತರು ಅತಿ ವಿರಳ. ಅವರ ಹೃದಯದಲ್ಲಿ ಸ್ನೇಹಲತೆಗೆ ಕುಸಿಬಿಡಲು ಅವಕಾಶವೇ ಇರಲಿಲ್ಲ. ಅವರ ಕೊಠಡಿಗೆ ಇಂದು ಬಂದವರು ನಾಳೆ ಒರುತ್ತಿರಲಿಲ್ಲ; ನಾಳೆ ಹೊಗೋಣವೆಂದಿದ್ದವರು, ಇಂದೇ ಅದನ್ನು ಮುಂದುವರಿಸಿಬಿಡುವರು. ಡಾ||ರ ಆತಿಥ್ಯದ ಆದರ, ಅವರ ಸಂಭಾಷಣ ಸಾಮರ್ಥ್ಯ, ಅಸ್ಪರದಾಗಿತ್ತು... ಅಲ್ಲದೆ, ಡಾ||ರ ಮಾತಿನ ಸುರಿಮಳೆಗಿಂತ ಅವರಿಗೆ ಅವರೊಂದಿಗೆ ಹೊರಡುತ್ತಿದ್ದ ಮತ್ತೊಂದು ಸುರಿಮಳೆಯ ಹೆದರಿಕೆ ಹೆಚ್ಚಾಗಿತ್ತು... ಮುಖ್ಯಪ್ರಾಣನದೂ ತಪ್ಪಿಲ್ಲದೆ ಇಲ್ಲ. ಅವನ ಚಹಾ ಕಷಾಯ ತೀರಾ ಹೊಲಸು.

ಡಾ||ರ ಸಂಭಾಷಣೆಯ ವಿಷಯಗಳೂ ಕೂಡ, ಸಾಮಾನ್ಯ ಜನರಿಗೆ ಕಗ್ಗಂಟು ! ಕ್ರೊಮೊಸೋಮು, ಎಕ್ಲಿಪ್ಟಿಕ್ಸು, ನೋಡಿಯುಂವೇಪರು, ಆಸಿಲ್ಲೇಷನ್, ಹಿಮೊಗ್ಲೋಬಿನ್ ಮುಂತಾದ ಕಬ್ಬಿಣದ ಕಡಲೆಗಳನ್ನು ಅವರು ಎಷ್ಟು ಹೊತ್ತು ಮೆದ್ದಾರು? ಆಗಾಗ, ಡಾ||ರ ಪ್ರಶ್ನೆ ಬೇರೆ, "ಅರ್ಥವಾಯಿತೆ ನಾನು ಹೇಳೋದು?" ಎಂದು. ಉದ್ದಕ್ಕೂ, ಆ ಪಶು ಕೂತು ಹೂಂಗುಟ್ಟುತ್ತಲೇ ಇರಬೇಕು. ಅಲ್ಲದೆ, ಡಾ||ಗೆ ಅನೇಕ ಭಾಷೆಗಳ ಪರಿಚಯ ಉಂಟು. ಜಗತ್ತಿನಲ್ಲಿ, ವಿವಿಧ ಜನಾಂಗದವರು ಆಡುವ ಭಾಷೆಗಳು ಮಾತ್ರವೇ ಅಲ್ಲ, ಡಾ||ರೇ ತಮ್ಮ ಸ್ವಂತ ಉಪಯೋಗಕ್ಕಾಗಿ, ಇತರರಿಗೆ ಅರ್ಥವಾಗದಂತೆ, ಮೂರು ನಾಲ್ಕು ಹೊಸ ಭಾಷಗಳನ್ನು ರಚಿಸಿದ್ದರು. ಇದ್ದಕ್ಕಿದ್ದಂತೆ, ಅವರು ತಮ್ಮ ಸ್ವಯಂಕೃತ ಶಬ್ದಕೋಶವನ್ನು ಶರಣು ಹೋಗುವರು. ಆಗ, ಎದುರಿಗಿದ್ದ ಪ್ರಾಣಿಗೆ ಯಾವಾಗ ಹೂಂಗುಟ್ಟಬೇಕೆನ್ನುವುದೂ ತಿಳಿಯದು.


ಇಷ್ಟಾದರೂ, ಒಬ್ಬ ಗೆಳೆಯ ಮಾತ್ರ, ಒಬ್ಬ ಮಾತ್ರ ಕೊನೆಯವರೆಗೂ ಡಾ||ರ ಟೀಯನ್ನೂ ಕಾಲವನ್ನೂ ವೆಚ್ಚಮಾಡುತ್ತಿದ್ದ. ಯಾವ ರೀತಿಯ ತಮ್ಮ ಉಪನ್ಯಾಸ ವೈಖರಿಯಿಂದಲೂ, ಡಾ|| ಡಾಮೋದರಂಗೆ ಆತನನ್ನು ಹೊರಕ್ಕೆ ನೂಕಲು ಸಾಧ್ಯವಾಗಲಿಲ್ಲ. ಡಾ||ಗೆ ಬೇಕಾದ ವಿಚಿತ್ರ ಸಂಶೋಧ

ನಾಲಯವನ್ನು ಒದಗಿಸಿದ ಶ್ರೀಮಂತ ವ್ಯಕ್ತಿಯ ದ್ವಿತೀಯ ಪುತ್ರನೇ ಆತ
ಹೆಸರು ಸುಂದರಲಾಲ್. ಆತನನ್ನು ಒಮ್ಮೆ ನೋಡಿದವರೆಲ್ಲರೂ, ಸುಂದರ್
ಎಂದು ಕರೆಯಲು ಹಿಂಜರಿದು, ಆತನನ್ನು ಲಾಲ್ ಎಂದೇ ಸಂಬೋಧಿಸು
ತ್ತಿದ್ದರು. ಲಾಲ್‌ರು ಡಾ||ರ ಎದುರು ಕುಳಿತು, ಅವರ ಮೀಸೆ ಮೇಲಕ್ಕೂ
ಕೆಳಕ್ಕೂ ಪ್ರಯಾಣ ಮಾಡುತ್ತಿದ್ದುದನ್ನೇ ಅವಲೋಕಿಸುವನು. ಡಾ||ರ ಉಬ್ಬು
ಹಲ್ಲು ಒಳಕ್ಕೂ ಹೊರಕ್ಕೂ ಬಹಿರ್ಧಾನ ಅಂತರ್ಧಾನ ಮಾಡುವುದನ್ನು ನೋಡಿ,
ನಗುವನ್ನು ನುಂಗುವನು.

— ಪಾಟೂಳಿ.

—— o ——

ಸ್ಪೈನ್ ಬೋರ್ಡುಗಳು



ಒಂದು ಬೋರ್ಡೂ ಮಾರುಕ್ಕೆ ಆಗಿಲ್ಲವಯ್ಯಾ!
ಹೇಗೆ ಹೊಟ್ಟೆ ಹೊರೆಯೋದು?

ಟೀಕೆಯ ಫಲ

ಸಂನ್ಯಾಸಿಯೊಬ್ಬ ನಮ್ಮೂರಿಗೆ ಬಂದ ನಮ್ಮೂರು ತುಂಬಾ ಟೀಕಾಚಾರ್ಯರೇ! ಜನಾಭಿಪ್ರಾಯ ಬಹು ತೀಕ್ಷ್ಣವಾಗಿ ರೂಪುಗೊಳ್ಳುತ್ತದೆ, ನಮ್ಮೂರಲ್ಲಿ. ಬರೀ ವೇದಾಂತ ಉಪದೇಶ ಮಾಡುತ್ತಾನೆ, "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು" ಎಂದು ಭಕ್ತ ಭಂಡಾರಿ ಹೇಳಲಿಲ್ಲವೆ; ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಾಗಿರುವಾಗ, ಒಣ ವೈರಾಗ್ಯ ಆತ್ಮ ಚಿಂತನ ಇವು ತೀರ ಅನವಶ್ಯಕ, ನಾವು ನಿತ್ಯ ಜೀವನವನ್ನು ಹೇಗೆ ಹಸನಾಗಿಸಬೇಕು ಎಂದು ಉಪದೇಶ ಮಾಡುವನು, ಎಂಥ ಗುರು?" ಎಂದೆಲ್ಲ ಟೀಕೆಗಳೆದ್ದುವು. ಸರಿ. ಆತ, ಖಾಯಿಲೆಗಳಿಗೆ ಔಷಧಿ, ಪ್ರೇತಗಳಿಗೆ ತಾಯಿತೆ, ಪಿಶಾಚಿಗೆ ಬೂದಿ, ಹಂಚುತ್ತಾ ಬಂದ. ಕೆಲವು ವಾಸಿ, ಕೆಲವು ಗಾಸಿ. ಮತ್ತೆ ಪ್ರಾರಂಭ, ಟೀಕೆಗಳ ಗುಡುಗು ಸಿಡಿಲು. ಅಳಲೆಕಾಯಿ ಪಂಡಿತ, ಮೂರು ಕಾಸಿನ ಮಾಟಗಾರ, ಸುಡುಗಾಡು ಸಿದ್ಧ, ರಕ್ಕ, ಕಳ್ಳ ಸಂನ್ಯಾಸಿ ಇತ್ಯಾದಿ. ಗಡ್ಡ ಬಿಟ್ಟ; ಬೂಟಾಟಿಕೆ ದಾಸಯ್ಯ, ಜಿಪುಣ, ಕೊಳಕ ಅಂದರು. ಬೋಳಿಸಿದ, ಷೋಕಿಲಾಲ ಅಂದರು. ಕೌಪೀನ ಧರಿಸಿದಾಗ, ಈ ಆಡಂಬರವೇಕೆ, ಎಂದರು. ನಟನೆ, ಎಂದರು ಧೋತ್ರ ಹೊದ್ದ. ಚಳಿಗಾಳಿಗೆ ಹೆದರುವವನು ನಮಗೆ ಅಭಯ ಕೊಟ್ಟಾನೆಯೆ, ಎಂದು ಶಂಕಿಸಿದರು. ಸಂಸ್ಕೃತದಲ್ಲಿ ಮಾತನಾಡಿದರೆ ಪಂಡಿತರನ್ನು ಬೆರಗುಗೊಳಿಸುವ ವಿದ್ಯಾಹಂಕಾರಿ ಎಂದರು. ಕನ್ನಡದಲ್ಲಿ ಷುರುಮಾಡಿದರೆ, ಎದೆ ಸೀಳಿದರೆ ಎರಡಕ್ಷರವಿಲ್ಲ ಎಂದರು. ಮಾತಾಡದೆ, ಸುಮ್ಮನೆ ಕೂತಿದ್ದರೆ, ಸ್ಲೇಟ್ ಕೊಟ್ಟು ಸಂದೇಶ ಬರೆದುಕೊಡಿ ಎಂದು ಪೀಡಿಸಿದರು. ಕೊಟ್ಟಾಗ, ಇವನೇನು ಮಂತ್ರಿಯೇ? ಸಂದೇಶ ಕೊಡೋದಕ್ಕೆ ಎಂದು ಗಹಗಹಿಸಿದರು. ಫೋಟೋ ತೆಗೆದರೆ ಇವನಿಗೇನು ಕೇಡು, ಇವನ ಸತ್ವವನ್ನು ನಾವು ಹೀರಿಬಿಡುತ್ತೇವೆಯೆ ಎಂದ ತರ್ಕಿಸಿದರು. ತೆಗೆದು ಪೇಪರಲ್ಲಿ ಹಾಕಿದರು. ಆ ಮೇಲೆ, ಸಂನ್ಯಾಸಿಗೆ ಪ್ರಚಾರ ಏಕೆ? ವನಸುಮದಂತಿರುವುದಲ್ಲವೆ ಅವನಿಗೆ ಭೂಷಣ? ಅಂದರು. ಕಾರಲ್ಲಿ ಕೂರಿಸಿಕೊಂಡು ಹೋಗಿ, ಇವನಿಗೆ ಕಾರಿನ ಖುಷಿ ಏಕೆ, ಎಂದು ರೇಗಿದರು. ಮಲಗಿದರೆ, ಸೋಮಾರಿ; ಮಾತಾಡಿದರೆ, ಹರಟೆಮಲ್ಲ, ರೇಗಿದರೆ, ಕೋಪಿಷ್ಠ; ತೆಪ್ಪಗಿದ್ದರೆ, ತೊಪ್ಪೆ! ಹೀಗೆ ವ್ಯಾಖ್ಯಾನ ಮಾಡಿ ಪೀಡಿಸಿ, ಅವನ ಬಿಡಾರವನ್ನು ನಮ್ಮೂರಿಂದ ಒಂದೇ ತಿಂಗಳಲ್ಲಿ ಕೀಳಿಸಿದರು, ನಮ್ಮೂರವರು, ಪ್ರಚಂಡರು.

ಹೊಸಬರ ಗೋಳು


—— o ——

ಹೊಸಬರಿಗೆ ಬೆಂಗಳೂರಿನಂಥ ಬೆಂಗಾಡು ಬೇರೊಂದಿಲ್ಲ. ಅನುಭವದ ಮಾತು ನನ್ನದು. ಹುಟ್ಟಿದಲಾಗಾಯಿತು, ಹೊರಗಡೆಯೇ ತಿರುಗುತ್ತಿದ್ದ ನಾನು, ಮೊನ್ನೆ ವರಾನ್ವೇಷಣ ಪ್ರಯುಕ್ತ, ಕರ್ನಾಟಕದ ಕಿರೀಟ, ಕಲ್ಯಾಣ ನಗರ, ಬೆಂದಕಾಳು ತಿಂದ ಊರು, ಕೆಂಪೇಗೌಡನ ಸೊಂಪಿನ ನಗರ, ಬೆಂಗಳೂರಿಗೆ ಬಂದೆ. ರೈಲಿಂದ ಇಳಿಯುತ್ತಲೂ, ನಾನು ಪತ್ತೆಹಚ್ಚಬೇಕಾಗಿದ್ದ ಬೀದಿಯ ಹೆಸರನ್ನು ಹೇಳಿ, ಎಲ್ಲಿದೆ ಈ ಜಾಗ, ಹೇಳ್ರಪ್ಪ ಅಂತ ಸುಮಾರು ೧೫೦ ಜನರನ್ನು ಕೇಳಿದ್ದುಂಟು. ಒಬ್ಬರಿಗೂ ಕನ್ನಡ ಬರದು! ತಮಿಳರು, ತೆಲುಗರು, ಸಿಂಧಿಯರು, ಮರಾಠಿ ಜನ, ಕೊಂಕಣಿಯರು, ಸಂಕೇತಿಯವರು, ಉರ್ದು ಸಹೋದರರು ಇಂಥಾವರೇ ನನ್ನ ಪಾಲಿಗೆ ಸಿಕ್ಕರು. ಆ ರೆಯಿಲು ಸ್ಟೇಷನ್ ಸೇತುವೆ ಮೆಟ್ಟಲುಗಳನ್ನು ಹತ್ತು ಬಾರಿ ಹತ್ತಿದೆ; ಇಳಿದೆ. ಕಾಲೆಲ್ಲ ನೋತು ಬೇಸ್ತು ಹೊಡೆಯಿತು. ನೆಟ್ಟಗೆ ಅಡ್ಡಲಾಗಿ ಮಲಗಿಬಿಡೋಣ, ಪೋಲೀಸ್ ಸ್ಟೇಷನ್‌ಗೋ ಆಸ್ಪತ್ರೆಗೋ, ಪುಣ್ಯಾತ್ಮರು ಸಾಗಿಸೇ ಸಾಗಿಸುತ್ತಾರೆ, ಅಂತ ಮನಸ್ಸು ಮಾಡಿಕೊಂಡೆ.

ಆಗ ದೇವರು ಪ್ರತ್ಯಕ್ಷವಾದ; ಒಬ್ಬ ಪೋಲೀಸಿನವನೇ ಎದುರಿಗೆ ಬಂದ. ನಾನು ಹೋಗಬೇಕಾಗಿದ್ದ ಬೀದಿಗೆ ನಾನು ಹೇಳಿದ ಹೆಸರಲ್ಲವಂತೆ, ಈಗ! ಅದಕ್ಕೆ ಕರ್ಜನ್, ರೀಡಿಂಗ್, ವಿಲ್ಲಿಂಗ್‌ಡನ್, ಇತ್ಯಾದಿ ನಾಮಕರಣಮಾಡಿ, ಅವರ ಕಾಲ ಮುಗಿದ ಮೇಲೆ ಹಲವಾರು ಬೆಂಗಳೂರು ಮಹನೀಯರುಗಳ ಹೆಸರನ್ನಂಟಿಸಿ, ಅದೂ ಜನಕ್ಕೆ ಬೇಜಾರಾದಾಗ, ಈಗ ಬೇರೆ ಹೆಸರಿಟ್ಟಿದ್ದಾರಂತೆ. ಗಾಂಧೀ ರಸ್ತೆ ಅಂತ ಕೇಳಿ, ಎಂದು ಹೇಳಿ ಪೋಲೀಸಿನವನು ಮಾಯವಾದ.

ಗಾಂಧೀ ರಸ್ತೆ ಗಾಂಧೀನಗರದಲ್ಲಿರಬೇಕೆಂದು ಯಾರೋ ಸೂಚನೆ ಕೊಟ್ಟರು. ಅಲ್ಲೆಲ್ಲ ತಿರುಗಿದೆ. ಗಾಂಧೀದಾರಿ ಅಲ್ಲಿ ಒಂದೂ ಕಾಣೆ. ಗಾಂಧೀ ಬಜಾರ ಹತ್ತಿರ ಹೋಗಿ ಅಂತ ಒಬ್ಬರು ಸಲಹೆ ಇತ್ತರು. ಅಲ್ಲೂ ಎಲ್ಲ ಕತ್ತಲೆ, ನನಗೆ ಬೇಕಾದ ಬೆಳಕು ದೊರೆಯಲಿಲ್ಲ; ಗಾಂಧೀ ಚೌಕ, ಗಾಂಧೀ ಸರ್ಕಲ್, ಎಲ್ಲ ತಿರುಗಿದೆ. ಸುಸ್ತಾಯಿತು; ಕೋಪ ಬಂತು; ಹೊಟ್ಟೆ ಕೆರಳಿತು. ಒಬ್ಬ

ನಾಗರಿಕ, "ಬರೀ ಗಾಂಧಿ ರಸ್ತೆಯೋ, ಮಹಾತ್ಮಾ ಗಾಂಧೀ ರಸ್ತೆಯೋ"? ಎಂದ. "ಎರಡೂ ಒಂದೇ ಅಲ್ಲವೆ?" ಎಂದೆ. ಸರಿ! ಹಾಗಾದರೆ, ಕಂಟೋನ್‌ಮೆಂಟ್ ಕಡೆ ಹೊರಡಿ, ಅಂದ. ಹೊರಟೆ. ಮಧ್ಯಾಹ್ನ ಎರಡು ಗಂಟೆ ಬಿಸಿಲು; ಟಾರ್ ರೋಡು; ರಕ್ಷೆ ಇಲ್ಲದ ಪಾದ ಅದೊಂದು ಅಂಗಡಿ ಬೀದಿ! ಶ್ರೀ ೧೦೮ ಮಂತರ ಅಂಗಡಿ ಸಾಲು . ಹಿಂತಿರುಗಿದೆ. ಪ್ರತಿ ದಿಕ್ಕಲ್ಲೂ, ಒಂದು ಗಾಂಧೀ ರಸ್ತೆ ಇದ್ದೇ ಇದೆ. ಎಲ್ಲಿಗೆ ಅಂತ ಹೋಗಲಿ! ಏನು ಅಂತ ಹುಡುಕಲಿ! ಘಳಿಗೆ ಘಳಿಗೆಗೂ ಬೀದಿಗಳ ಹೆಸರುಗಳನ್ನು ಬದಲಾಯಿಸುತ್ತಿದ್ದರೆ, ಬಡವರ ಪಾಡೇನು? .. ಕಡೆಗೆ ಒಬ್ಬ ಪೋಸ್ಟ್‌ಮ್ಯಾನ್ ಸಿಕ್ಕಿದ ಅವನನ್ನ ಬಹು ವಿನಯದಿಂದ ಪ್ರಶ್ನಿಸಿದೆ. ಪ್ರಾಣಿ ತುಂಬಾ ನಯಸ್ಥ. "ನಮಗೂ ನೋಡಿ! ಅದೇ ತಾಪತ್ರಯ! ಗಾಂಧೀ ಭಕ್ತರು ತುಂಬಿ ತುಳುಕಾಡುತ್ತಿರುವ ಈ ಬೆಂಗಳೂರಲ್ಲಿ!" ಎಂದ. "ನೋಡಿ, ಮೊನ್ನೆ ಒಂದು ರಸ್ತೆಗೆ ಅದೇ ಹೆಸರನ್ನಿಟ್ಟರು; ಅದಕ್ಕೆ ಹಿಂದೆ ಏನೇನು ಹೆಸರಿತ್ತು ಗೊತ್ತೆ? ವಿಲ್ಲಿಂಗ್‌ಡನ್ ರೋಡು, ರೀಡಿಂಗ್ ರೋಡು, ಕರ್ಜನ್ ರೋಡು, ಬೌರಿಂಗ್ ರೋಡ್, ಚೂರ್ಣಯ್ಯ ರೋಡು, ಶಿಂಗ್ರಾಚಾರ್ ರಸ್ತೆ, ಅಮಿಲ್ದಾರ್ ಗುಂಡಪ್ಪನ ರಸ್ತೆ. ." "ಆ! ಅದೇ! ಅಮಿಲ್ದಾರ್ ಗುಂಡಪ್ಪನ ರಸ್ತೆಯೇ ನನಗೆ ಬೇಕಾದದ್ದು!" ಎಂದು ಅವನನ್ನು ತಬ್ಬಿಕೊಂಡೆ.



ಸಾಮಿ! ಈಗಲೇ ಬಸ್ಸು ಬರುತ್ತೆ— ಇರಿ!

ಪದವೀಧರ

ನನಗೆ ಪಾಸಾಯಿತು; ಬಿ.ಎಸ್.ಸಿ! ನಾನೊಬ್ಬ ವಿಜ್ಞಾನ ಬ್ರಹ್ಮಚಾರಿ! ವಿಶ್ವವಿದ್ಯೆಯಲ್ಲಿ ಪದವೀಧರ. ನಾಳೆಯಿಂದ ನಾನು ದೇಶ ಸೇವಕ, ಭಾರತೋದ್ಧಾರಕ, ಮುಂದಾಳು, ಜನನಾಯಕ, ದೇಶ ರಕ್ಷಕ!. ಯೋಚನೆ ಮಾಡಿದರೆ, ನನಗೇ ದಿಗಿಲಾಗುತ್ತದೆ. ನನ್ನಂಥವನನ್ನೂ ಈ ಪದವಿಗೇರಿಸಿದರಲ್ಲಾ, ಅಂತ ಆಶ್ಚರ್ಯವಾಗುತ್ತದೆ. ನಾನು ಒಂದು ಪಠ್ಯಪುಸ್ತಕವನ್ನೂ ಓದಿಲ್ಲ; ಅವುಗಳ ಮೇಲೆ ಬರಬಹುದಾದ ಎಂಟು ಪ್ರಶ್ನೆಗಳಿಗೆ ಯಾರೋ ಒಬ್ಬ ಜ್ಯೋತಿಷ ಬಲ್ಲ ಮಹರಾಯರು ಬರೆದು ಕೊಟ್ಟ ಎಂಟು ಪ್ರಬಂಧಗಳನ್ನು ಗಟ್ಟಿಮಾಡಿ, ಇಳಿಸಿದೆ, ಅಷ್ಟೆ. ಇಂಗ್ಲೀಷು ಬರದು; ಕನ್ನಡವೂ ಅಷ್ಟಷ್ಟೆ. ಗಣಿತ ಮರೆತೆ; ವಿಜ್ಞಾನವೂ ಸಂತೆ ಹೊತ್ತಿಗೆ ಮೂರು ಮೊಳ ನೆಯ್ದುದ್ದಷ್ಟೋ ಅಷ್ಟೆ.. ಮೈ ಕೂಡ ಗಟ್ಟಿ ಮುಟ್ಟಾಗಿಲ್ಲ. ರೇಷನ್ ಊಟ; ಹೋಟಲುಗಳಲ್ಲಿ... ನಾಳೆಯಿಂದ ನಾನೇನು ಮಾಡಲಿ ?

ಗ್ರಾಮ ಸೇವೆ ? ನಮ್ಮ ದೇಶದ ರೈತರ ಜೀವನವೇ ನನಗೆ ತಿಳಿಯದು ; ನನ್ನ ಕುಲ ಕೇಳಿದರೇನೇ ಅವರು ರೇಗಬಹುದು. ಬೆಳೆ, ಮಳೆ, ದನ, ಕರ, ಗೊಬ್ಬರ, ಯಾವುದರ ಪರಿಯನ್ನೂ ನನಗೆ ಒಬ್ಬ ಉಪಾಧ್ಯಾಯನೂ ಬೋಧಿಸಿಲ್ಲ. ಶ್ವಾತಿ ಮಳೆ ಅಂತೆ, ಅನುರಾಧಾ ಮಳೆ, ಅಂತೆ ; ಶ್ರಾವಣ, ಭಾದ್ರಪದ ಅಂತ ತಿಂಗಳುಗಳ ಹೆಸರೂ ಕೂಡ ನನಗೆ ಉದ್ದಕ್ಕೂ ಹೇಳುವುದಕ್ಕೆ ಒರದು ! ಪಂಚಾಂಗ ಅಂದರೆ ಒಂದು ಪುಸ್ತಕ ಅಂತ, ಮೊನ್ನೆ ಬಸ್‌ಸ್ಟಾಂಡಲ್ಲಿ ಗೊತ್ತಾಯಿತು, ಯಾರೋ ಒಬ್ಬರು ಮಾರುತ್ತಿದ್ದರು ! ತಿಥಿ, ನಕ್ಷತ್ರ, ಅಮಾಸೆ, ಹುಣ್ಣಿಮೆ—ಏನೇನೋ ಇವೆಯಂತೆ, ಇಪ್ಪತ್ತೆಂಟು !

ಕ್ರಯ ಪತ್ರ, ಭೋಗ್ಯಪತ್ರ, ಒಂದೂ ನನಗೆ ಬರೆಯುವುದಕ್ಕೆ ಒರದು. ಪ್ರಗತಿ ಶೀಲ ಪ್ರಣಯಪತ್ರವಾದರೆ, ಒಂದು ಹಾಳೆ ತುಂಬ ಬಲ್ಲೆ! ಭಜನೆ ಹಾಡುಗಳೇ ಅಂತೆ ಹಳ್ಳಿಗಳಲ್ಲಿ ಪ್ರಚಾರ! ಎಂಥ ಅನಾಗರಿಕರು ಅವರು ಎಂಬುದಕ್ಕೆ ಇದೊಂದೇ ನಿದರ್ಶನಸಾಕು! ಮೇರಿ ಬುಲ್ ಬುಲ್. ಆಹ! ಇಂಥವು ಬೇಕಾದರೆ, ನೂರೆಂಟು, ಹಾಸ್ಟಲಲ್ಲಿ ಅಭ್ಯಾಸಮಾಡಿ ಟೋರ್ನಮೆಂಟಲ್ಲಿ ಪ್ರೈಸ್ ಹೊಡೆದದ್ದು—ಆದರೆ, ಅವು ಹಳ್ಳಿಗಳಲ್ಲಿ ಚಲಾವಣೆಯಾಗವಂತೆ. ಅಂತು, ನಾನೂ ಪದವೀಧರ.

ಹೋಗಿ, ಒಂದು ಸಹಕಾರ ಸಂಘ ಸ್ಥಾಪಿಸಯ್ಯ, ಎಲ್ಲರನ್ನೂ ಸೇರಿಸಿ, ಅಂತಾರೆ ... ನನ್ನ ಬುಷ್ ಕೋಟು, ಹ್ಯಾಟು, ಚುರೂಟು, ನೊಣವಿೀಸ ಕಂಡರೆ ಯಾವನಾದರೂ, ಹತ್ರ ಬರ್ತಾನೆಯೆ? ಬಂದರೂ... ಅಸಹ್ಯ! ದಿನಕ್ಕೊಮ್ಮೆ ಮುಖಕ್ಷೌರ ಮಾಡಿಸಿಕೊಳ್ಳುತ್ತಾರಂತೆ, ಅಮೇರಿಕಾದ ರೈತ ಜನಾಂಗ, ನಮ್ಮ ಮೇಷ್ಟರು ಹೇಳಿದರು. ಅಲ್ಲಿಗೆ ಹೋಗಿ, ಆ ರೈತರ ಸೇವೆ ಮಾಡಿದರೆ, ಅದೀಗ ಹೆವನ್ನು! .. ಧತ್! ಅದರ ಅರ್ಥ ಕೂಡ ಬರದ್ದು, ನಮ್ಮವರಿಗೆ!

"ಹೆಚ್ಚು ಆಹಾರ ಬೆಳೆಯಿರಿ" ಅಂತ ನಾನು ಹೋಗಿ ಪ್ರಚಾರ ಮಾಡಿದರೆ, ನನಗೋಸ್ಕರ, ಎಂದು ಅವರು ತಿಳಿದುಕೊಳ್ಳದೆ ಇರುತ್ತಾರೆಯೆ? ಬೆಳೆಯುವ ವಿಧಾನ, ನನಗೇನು ಗೊತ್ತು? ಅವರ ಚರಂಡಿಗಳನ್ನು ನಾನೊಂದು ದಿನ ರಿಪೇರಿ ಮಾಡಿದರೆ, ಗಳಿಗೆ ಗಳಿಗೆಗೂ ಅವರು ನನ್ನ ಕೈಯ್ಯನ್ನೇ ಕಾಯುತ್ತಾರೆ. ಓದು ಬರಹ ಕಲಿಸೋಣವೆಂದರೆ, ಅವರೂ ನನ್ನಂತೆ ಅಪ್ರಯೋಜಕರಾಗುತ್ತಾರೆ ಎಂಬ ಭಯ ಬೇರೆ. ಪತ್ರಿಕೆಗಳನ್ನು ಅವರಿಗೆ ಓದಿ ತೋರಿಸೋಣವೆಂದರೆ, ದೇಶದ ಮುಂದಿರುವ ಆರ್ಥಿಕ ಸಾಮಾಜಿಕ ರಾಜಕೀಯ ಸಮಸ್ಯೆಗಳ ಒಳ ಮರ್ಮ ಹೊರಮರ್ಮ ನನಗೇನೂ ತಿಳಿಯದು. ನಾನು ಓದಿರುವುದೆಲ್ಲ ಸಿನಿಮ ಸಾಹಿತ್ಯ. ಮಧುರಂ ಕೃಷ್ಣನಾಗಿ, ಕೃಷ್ಣನ್ ಮಧುರಂ ಆಗಿ, ಯಾವ ಚಿತ್ರ ದಲ್ಲಿ ನಟಿಸಿದಾರೆ, ಅಂದರೆ, ತಕೊ! ರಾಜಾ! ಆನ್ಸರ್ ಮಾಡುತ್ತೇನೆ. ನರ್ಗಿಸ್ ವಾಸ್ತಿ ಸೂರಯ್ಯ, ಇತ್ಯಾದಿ ಸಹಸ್ರ ನಾಮ ಮಾಡಬಲ್ಲೆ. ಎರಡ ನೆಯದಾಗಿ, ನಾನು ಓದುವುದು ಕ್ರಿಕೆಟ್ ಸಾಹಿತ್ಯ. ಗಮಾರರೆದುರು ಫಡ್ಕರ್ ವಿಷಯ ಹೇಳೋನು, ದಡ್ಡ! ಮತ್ತೆ, ಉಳಿದಿರುವುದು ವಾರಭವಿಷ್ಯ ಜಾಹಿರಾತು ಗಳು: ಅವೇನೋ ಬಹು ಸ್ವಾರಸ್ಯವಾಗಿರುತ್ತವೆ, ಅನ್ನಿ. ಮಂತ್ರದ ಉಂಗುರ, ಭದ್ರಕಾಳಿ ಯಂತ್ರ, ಮದನಾನಂಧ ಗುಟಿ—ಇತ್ಯಾದಿಗಳನ್ನು ನಮ್ಮ ಕನ್ನಡ ಪತ್ರಿಕೆಗಳ ಮೂಲಕ ದೇಶದಾದ್ಯಂತವೂ ಪ್ರಚುರಪಡಿಸುತ್ತಿರುವುದು ಉತ್ತಮ ದೇಶಸೇವೆ ಆದರೆ, ಹಳ್ಳಿಗರಿಗಿವೆಲ್ಲ ಏಕೆ? ಅಂತೂ, ನಾನೊಬ್ಬ ಪದವೀಧರ! ಬಿ.ಎಸ್.ಸಿ. ನಾಳೆಯಿಂದ ಏನು ಮಾಡಬೇಕೋ, ತಿಳಿಯದಾಗಿದೆ.

— ಕೆ ಆರ್.

—o—

ಪ್ರೈ॥ ಅನುಕೂಲ್‌ಸಿಂಗ್

ಅವತ್ತು ಆದಿತ್ಯವಾರ ಅಭ್ಯಂಜನ ಮೋಟು ಪಾಣಿ ಪಂಚೆ, ತಲೆಗೆ ಹರಳೆಣ್ಣೆ ಮೆತ್ತಿಕೊಂಡು ನೀರೊಲೆ ಉರಿಮಾಡುತ್ತಿದ್ದೆ. ಮೀನಾಕ್ಷಿ ಬಂದವಳು ‘‘ಇನ್ನೆರಡು ಸರ್ಪೆ ತುಂಡು ತೆಗಿಯಬಾರದೆ ಬೇಗ ನೀರು ಕಾಯುತ್ತೆ–ಅಷ್ಟಕ್ಕೂ ಅಡಿಗೆ ಒಲೆಗೂ ಕಟ್ಟಿಗೆ ಬೇಕು ಕೊಂಚ ಅಟ್ಟದಿಂದ ತೆಗೆಯಿರಿ’’ ಎಂದು ಆಜ್ಞಾಪಿಸಿದಳು. ನಾನು ಬಳಿಯಲ್ಲಿಯ ಪಂಚಪಾತ್ರೆ ಬೋರಲು ಹಾಕಿ ಕಾಲು ಏರಿಸಿ ಅಟ್ಟದ ಮೇಲಿನ ಕಟ್ಟಿಗೆ ಒಟ್ಟುಗೂಡಿಸಿದೆ: ಮೀನಾಕ್ಷಿ ‘‘ಕಂತೆ ಕೊಂಚ ದೊಡ್ಡದಾಯಿತಲ್ಲವೆ?’’ ಎಂದಳು. ಅದನ್ನು ಇಳಿಸುವ ಯೋಗ್ಯತೆ ನಿಮಗಿಲ್ಲ ಎಂಬ ಕುಹುಕು ನೋಟವಿತ್ತು ಕಣ್ಣಲ್ಲಿ. ನಾನು ಆ ಹೆಣ್ಣಿನ ಮಾತು ಕೇಳದೆ ಗಂಭೀರ ಕೆಂಗಣ್ಣು ಗಂಡು ನೋಟ ಬೀರಿದೆ. ‘‘ಏನಾದರೂ ಮಾಡಿಕೊಳ್ಳಿ’’ ಎಂಬ ತಾತ್ಸಾರದ ಭಾವ ಬೀರಿ ತಲೆ ತಗ್ಗಿಸಿದಳು.

ನಾನು ರೇರ್ಷ ಕಾಲದ ಜಟ್ಟಿ ಆದರೂ ನನ್ನ ರಟ್ಟೆಯ ಒಲದ ಮೇಲೆ ಭಾರ ಹಾಕಿ ಹೊರೆಗೆ ಕೈ ಹಾಕಿದೆ. ಹೊರೆ ಭಾರವಾಗಿತ್ತು—ನನ್ನ ದಮ್ಮಿಗೆ ಮೀರಿದ್ದು. ತುಟಿ ಕಚ್ಚಿ ಕೆಂಪಡರಿದ ಮುಖ ಮಾಡಿಕೊಂಡು ಹೊರೆ ತಬ್ಬಿ ಕೊಂಡು ಸೊಂಟ ಬಗ್ಗಿಸಿ ಇನ್ನೇನು ಕೆಳಕ್ಕಿಳಿಸಬೇಕು ಅಷ್ಟರಲ್ಲಿ ಸೊಂಟ ಖಳಕ್ ಎಂದಿತು ‘‘ಅಯ್ಯಯ್ಯೋ’’ ಎಂದು ಅರಚಿದೆ. ಗಾಬರಿಯಾದ ಮೀನಾಕ್ಷಿ ‘‘ನಾನಾಗಲೇ ಹೇಳಿದೆ ಹೆಂಗಸರ ಮಾತು ತಾನೆ .’’ ಎಂದು ಹಂಗಿಸಿ ಘಾಯಕ್ಕೆ ಮೊಳೆ ಹೊಡೆದ ಹಾಗೆ ಅಂದಳು. ಅವಳೂ ಕೈಹಾಕಿ ಕಂತೆ ಕೆಡವಿ ಕೈಕೊಟ್ಟು ಪಂಚಪಾತ್ರೆಯಿಂದ ಕೆಳಗಿಳಿಸಿದಳು. ಅದೇ ನೆಪವಾಗಿ ಸೊಂಟ ಮೇಲಕ್ಕೆತ್ತಲು ಬರದಂತಾಯಿತು. ಮುಂದೇನು ಎಂದು ತೋಚದೆ ಗೋವಿಂದನಿಗೆ ಬರಹೇಳಿದೆ. ವಿಷಯ ತಿಳಿದ ಗೋವಿಂದ ಜಟಕಾ ಗೊತ್ತುಮಾಡಿಕೊಂಡೇ ಬಂದಿದ್ದ. ‘‘....ಸೊಂಟ—ಬೆನ್ನುಹುರಿ ಖಳಕ್ ...ಗೋವಿಂದಾ...’’ ಎಂದು ತೊದಲಿದೆ. ‘‘ಗ್ರಹಚಾರ ಯಾತಕ್ಕಾದರೂ ಕಟ್ಟಿಗೆ ಇಳಿಸಲಿಕ್ಕೆ ಹೇಳಿದೆನೋ.... ನಾನೇ ಇಳಿಸಬಾರದಾಗಿತ್ತೆ? .’’ ಎಂದು ಕಣ್ಣೀರಿಟ್ಟಳು. ‘‘ಪ ಪ ಪ ಕಡೋ .. ಹ ಹ ಹಾತ್, ವ್ಯೆ ಕಾಲ್ ಪ ಪ ಪಕಡ್ತು..’’ ಎಂದು ಗೋವಿಂದಾ ಜಟಕಾ ಸಾರಥಿಗೆ ಹೇಳಿದ. ‘‘ಎಲ್ಲಿಗೋ’’ ಎಂದು ಗೊಣಗಿದೆ.. ಆಗಲೇ ನನ್ನನ್ನು ಗಾಡಿಯಲ್ಲಿ ಹೇರಿದ್ದರು—ಅಂಗಲಾಚಿದರೂ ಕೇಳಲಿಲ್ಲ. ‘‘ಹ ಹ ಹ ಹಕಾಲೋ

ಪ ಪ ಪೈಲ್ವಾನ್ ಅನುಕೂಲ್ ಸಿ ಸ್ಸಿಂಗಕ ದ ದವಾಖಾನೆಕು..'' ಎಂದು ಹೊರಡಿಸಿದ ಗೋವಿಂದ.

ಗೋವಿಂದ ಕೊಂಕಳಿಗೆ ಕೈ ಹಾಕಿದ್ದ ಜಟಕಾ ಸಾಬಿ ಕಾಲು ಹಿಡಿದಿದ್ದ ''ಅಯ್ಯೋ. ಸೊಂಟ'' ಎಂದು ನರಳುತ್ತಲೇ ಕಣ್ಣು ಹೊರಳಿಸಿದಾಗ ಕಂಡದ್ದು ಅನುಕೂಲ್‌ಸಿಂಗರ ಕೆಂಚು ಮೀಸೆ ಹಳದಿ ಪೇಟ ಕರೀ ಸುರುವಾಲ್ ಬಿಳೀ ಷೇರುವಾನಿ ಜರ್ಕೀ ಚಡಾವು. ಎತ್ತಿ ಬೆಂಚಿನ ಮೇಲೆ ಮಲಗಿಸಿದರು. ದುಃಖ ಪೂರಿತ ದೃಷ್ಟಿ ಬೀರುತ್ತಾ ಕೈಯ್ಯಲ್ಲಿ ಥರ್ಮಾಸ್ ಶೀಶೆ ಹಿಡಿದು ಮೀನಾಕ್ಷಿ ನನ್ನನ್ನೇ ನೋಡುತ್ತಿದ್ದಳು. ಸಿಂಗರು ಅಚ್ಚ ಕನ್ನಡದಲ್ಲೇ ನಾಡಿ ನೋಡಿದರು. ಬೆನ್ನು ಹುರಿ ಹಿಂಡಿ ಮೀಸೆ ತಿರುವಿ ''ಗಾಬರಿಗೆ ಕಾರಣವಿಲ್ಲ'' ಎಂದು ಹುಬ್ಬು ಹಾರಿಸಿದರು. ''ಇಂತಹದೇ ಒಂದು ಕೇಸು ನೆನ್ನೆ ಇಲ್ಲಿಗೆ ಬಂತು—ಇಲ್ಲಿಗೆ ಕಾಲಿಡುತ್ತಲೆ ಪರಂಧಾಮಕ್ಕೇರಿತು ಘಟ....ಇನ್ನು ನಾಲ್ಕನೆಯವನಾಗಿ ನಾನೇ ಹೆಗಲು ಕೊಟ್ಟು ಸಹಕರಿಸದಿದ್ದರೆ ನಮಗೂ ಮೃಗಗಳಿಗೂ ಏನು ವ್ಯತ್ಯಾಸ?'' ಎಂದು ನನ್ನನ್ನೇ ಕೇಳಿದರು. ನಾನು ''ಅಯ್ಯಯ್ಯೋ'' ಎಂದು ಹೇಳಿದೆ.

ಪೈಲ್ವಾನರು ಕತ್ತಿನ ಹಿಂಭಾಗ ತೀಡಿ ಎದೆ ನೀವಿ ಸೊಂಟದಿಂದ ಕತ್ತಿನ ವರೆಗಿನ ಪ್ರತಿ ಎಲುಬನ್ನೂ ಕಿವಿಚಿ ಕಿವಿಚಿ ನೋಡಿದರು. ''ಏನೂ ಭಯವಿಲ್ಲ .. ಇಂಥಾ ಸಾವಿರ ಕೇಸು ವಾಸಿಮಾಡಿದ್ದೇನೆ....ಕೇವಲ ನಿತ್ರಾಣದಿಂದ ಹೀಗಾಗಿದೆಯಲ್ಲದೆ—ಇನ್ನೇನು ಇದು ಮೋಹಿನಿ ಜ್ವರವಲ್ಲ ಮೆನಿಂಜೈಟಿಸ್ ಅಲ್ಲ.... ಒಂದೇ ತಿಂಗಳಲ್ಲಿ ಮೊದಲಿದ್ದಂತೆ ಮಾಡುವೆ....'' ಎಂದು ಹೇಳಿದರು. ಅವರ ವಾರ್ಡಿನಲ್ಲೇ ಇರಬೇಕೆಂದು ಹೇಳಿದರು.

ಕಲ್‌ಬತ್ತು ತರಿಸಿ ಒಂದೇ ಬಿಳೀ ಈರುಳ್ಳಿ ಹಿಂಡಿ ರಸ ತೆಗೆದರು. ಎರಡು ತೊಲೆ ಇಂಗಳೀಕ ತೂಗಿ ಸೇರಿಸಿದರು. ರಕ್ತಮಂಜಿಷ್ಟ ಕರೀಕೊರಂಗು ತೈಲ ಸೇರಿಸಿ ಚೆನ್ನಾಗಿ ಅರೆದು ಒಂದು ಕೆಂಪು ಮುಲಾಮು ತಯಾರಿಸಿ ಬೆನ್ನುಹುರಿಗೆ ಹಚ್ಚಿ ಬಾಳೆ ಎಲೆ ಹರಡಿ ಅಂಗಾತಾಗಿ ಮಲಗಿಸಿದರು. ಕೊಂಚ ಹಾಯಾಗಿ ಕಂಡಿತು. ಮೆತ್ತಗೆ ಅನ್ನ ಸಾರು ಮಾಡಿಕೊಂಡು ಬರುವುದಾಗಿ ಹೇಳಿ ಮೀನಾಕ್ಷಿ ಮನೆಗೆ ಹೋದಳು. ''ಗೊ ಗೊ ಗೋವಿಂದ'' ಎಂದೆ. ಅವನೂ ಮನೆಗೆ ಹೋದ.

''ಹೇಗಿದೆ ಸೊಂಟಾ'' ಎಂಹು ಬಂದವರೇ ನನ್ನ ಬೆನ್ನು ಗುದ್ದಿ ಪ್ರಾಣಾ ಹಿಂಡಿದರು ಪೈ|| ಅನುಕೂಲ್‌ಸಿಂಗ್. ಆಗತಾನೇ ಜೊಂಪು ಹತ್ತುತ್ತಿದ್ದುದು ಮಾಯವಾಗಿ ಹೌಹಾರಿ ಬೆವತು ಹಳ್ಳವಾಗಿ ಏನೋ ತೊದಲಲು ತೊಡಗಿದೆ. ಅವರು ಕೂಡಲೇ ನಾಲಿಗೆ ಚಾಚಿಸಿ ನಾಡಿ ಹಿಡಿದು ಎದೆ ನೀವಿದರು. ''....

ಜೀವಕ್ಕೆ ಭಯವಿಲ್ಲವೆ? ನೆಟ್ಟಗೆ ನೆಡೆಯಲು ಎಂದು ಬರುತ್ತಿ? '' ಎಂದು ಅಂಗಲಾಚಲು ಸಿಂಗರು ಅಂಗಾತ ಮಲಗಿಸಿ ಅಂಗಾಂಗವನ್ನೆಲ್ಲಾ ವಿಸ್ತರಿಸಿದರು. ಬಳಿಯ ಸ್ಟೂಲನ್ನಲಂಕರಿಸಿ ಮೆದುವಾಗಿ ಕೆಮ್ಮಿ ಪ್ರಾರಂಭಿಸಿದರು. ''ಇದೇನು ಕೇಸು- -ಹದಿನಾರು ಡೋಭಿಚಾಟ್--ಇಪ್ಪತ್ನಾಲ್ಕು ವರಸೆ—ಲಪಟ್ ಕೆ ದುನಿಯ ಧಡಂ ಧಡೀಲ... .. .ಅರ್ಥವಾಯಿತೆ?'' ಎಂದು ಕಲ್‌ಬತ್ತಿಗೆ ಇಂಗಳೀಕ ಹಾಕಿ ಅರೆಯುತ್ತಾ ಕೇಳಿದರು. ನಾನು ತಲೆ ಸಿಡಿಸಿ ''ಅದೇನು'' ಎಂದು ಕೇಳಿದೆ.

''ಇಂಗಳೀಕ... ಹ್ಹಹ್ಹ ಸಿಂಗಳೀಕನಿಗೇಕೆ ಇಂಗಳೀಕದ ರಸ ಎಂದೆನ್ನುತ್ತೀರೊ....ಅನ್ನಿ ಆದರೆ ನಾನು ಹೇಳಿದ್ದು ಜಿದ್ದಿನ ಕುಸ್ತಿಯ ಕಥೆ. ''

''ಕುಸ್ತಿ ಕಥೆ! ಡಾಕ್ಟ್ರೇ, ಸೊಂಟ ಫಣಿ ಫಣಿ ಅಂತ ಹೊಡಕೊತಾ ಇದೆ....''

''ಇದೆಂಥಾ ನೋವು ನೀವು ಹೇಳೋದು ೧೯೨೮ನೇ ಇಸವಿ—ಇದೇ ಮೊಳಕಾಲ್ಮೂರು... ಶ್ರೀದುರ್ಗದ ಪೈ|| ಅಣ್ಣಪ್ಪನಿಗೂ ನನಗೂ ಕೇವಲ ಒಂದು ತೆಂಗಿನ ಕಾಯಿಗಾಗಿ ಜಗಳ ಹುಟ್ಟಿತು.'' ಎಂದು ಬಾಳೆಎಲೆಗೆ ಬೆಣ್ಣೆಸವರಿ ಮುಲಾಮು ಹರಡಿ ಪಚ್ಚಕರ್ಪೂರದ ಪುಡಿ ಉದುರಿಸಿದರು. ಬೆನ್ನಿಗೆ ಬಿಸಿ ಬಿಸಿ ಎಣ್ಣೆಸವರಿ ಎಲೆ ಮುಚ್ಚಿದರು. ಮತ್ತೆ ಪ್ರಾರಂಭಿಸಿದರು—ನನಗೂ ಕೊಂಚ ನೋವು ಕಡಿಮೆಯಾದಂತೆ ತೋರಿತು.

"ತೆಂಗಿನಕಾಯಿ. .ಹನುಮಂತ ದೇವರ ಗುಡಿ—ಉಗಾದಿ ಹಬ್ಬ—ಒಂದೇ ಗುದ್ದು ಇಪ್ಪತ್ತು ತುಂಡು ಎಂದು ಅಣ್ಣಪ್ಪ ಷಡ್ಡು ಹೊಡೆದ— ನಾನು ನಲವತ್ತು ತುಕುಡ ಎಂದು ಮೀಸೆ ತಿರಿವಿದೆ—ಸರಿ ಮಾತಿಗೆ ಮಾತು ಚೂರಿಗೆ ಹತ್ತು ಚೂರು ಅಂತ ಪ್ರಾರಂಭವಾಗಿ ಜುಟ್ಟಿಗೆ ಜುಟ್ಟು ಬಂದು ನಿಂತಿತು. ನನಗೆ ರೇಗಿತ್ತು. ಕಚ್ಚೆ ಬಿಗಿದು ಷಡ್ಡು ಹೊಡೆದುಬಿಟ್ಟೆ. ಅಣ್ಣಯ್ಯನೇನು ಕಡಿಮೆ ಕುಳವಲ್ಲ ಅವನೂ ಗುಟರು ಹಾಕಿದ—ಸರಿ ಅಲಕ್ ನಿರಂಜನ್ ಅಂತ ಅಖಾಡಕ್ಕಿಳಿದೆ. ಲಪಟ್ ಅಂತ ಕುತ್ತಿಗೆಗೆ ಕೈಹಾಕಿದ್ದೆ ತಪ -ಘೋಭಿಚಾಟ್ - ಅಂತ ಒಂದು ಪಟ್ಟು ಕೇಳಿದ್ದೀರಾ —ಕಾಲು ಹಿಡಿದು ಒಟ್ಟೆ ಒಗಯೋ ಸಮಾಚಾರ ಹ್ಹಹ್ಹಹ್ಹ ಕೇಳಿ ಡೋಬಿಚಾಟ್ ಹಾಕಿ ಡಬಕ್ಕನೆ ಕೆಡವಿದೆ. ಅವನು ಮುಗ್ಗರಿಸಿದ, ಅದೇ ಒಂದು ಪಟ್ಟಿಂದು ಮೀಸೆ ತಿರಿಪಿಸ -ನನಗೆ ರೇಗಿತು ರೇಗೋಲ್ಲವೆ?.. ಸರಕ್ಕನೆ ಬಲಗೈ ತಿರಿವಿ ಕತ್ತಿಗೆ ಸುತ್ತಿ ಮೂಗು ಉಜ್ಜಿ ಕೆಡವಿಬಿಟ್ಟೆ '' ಎಂದು ಭರದಿಂದ ಹೇಳುತ್ತಾ ನನ್ನ ಸೊಂಟ ಎತ್ತಿ ಕುಕ್ಕಿದರು ''ಶಿವ ಶಿವಾ. ಅಯ್ಯಯ್ಯೋ. ಗೋವಿಂದಾ ಮೀಸೂ '' ಎಂದು ಶಂಖ ಪೂರೈಸಿದೆ. ಆಗ ಅನುಕೂಲ್ ಸಿಂಗರು ಮೈದಡವಿ.

''ಭಯವೇಕೆ? ನಾನಿಲ್ಲವೆ?... ಆಮೇಲೆ ಕೇಳಿ- ಮೈ ಕೈ ಮುರಿದು

ಕೊಂಡು ಮಲಗಿದ್ದ ಪೈ|| ಅಣ್ಣಪ್ಪನನ್ನ ಹಾಗೇ ಬಿಟ್ಟನೆ? .. ಇಲ್ಲ ನನ್ನ ದವಾಖಾನೆಗೆ ಹೊತ್ತು ತಂದು ಹಾಕಿದೆ—ಇದೇ ಕಲ್‌ಬತ್ತು ಇದೇ ಇಂಗಳಾರ—ಇದೇ ಈರುಳ್ಳಿ ಇವೇ ಕೈಗಳು. ತೊಟ್ಟು ಪಾದರಸ ಒಂದು ತೊಲ ಬಂಗಾರ ಭಸ್ಮ—ಬಾಳೆ ಎಲೆ—ಮೂರೇ ದಿನದ ಮುಲಾಮಿಗೆ—ನನ್ನ ಮೇಲೆ ಮತ್ತೆ ಷಡ್ಡು ಹೊಡೆಯುವಂತಾದ. ಅಂಥಾದ್ದರಲ್ಲಿ ಕೇವಲ ಬೆನ್ನು ಹುರಿಯ ಭವಣೆಗೆ ಯಾಕೆ ನೀವು ಬಿಕ್ಕಬೇಕು?... ''

''... ನೀವು ಪೈಲ್ವಾನರೇ ಆಗಿ ಏಕೆ ಅಖಾಡವನ್ನು ಉದ್ಧಾರಮಾಡಲಿಲ್ಲ? ....'' ಎಂದು ಕುತೂಹಲದಿಂದ ಕೇಳಿದೆ . ನೋವು ಬಹುಮಟ್ಟಿಗೆ ಬೆನ್ನು ಬಿಟ್ಟಿತ್ತು—ತಲೆ ಕಡೆಗೆ ಧಾವಿಸಿತ್ತು.

''ಕಾಲ—ದೇಶ—ಜನತಾರತಮ್ಯ ಇಲ್ಲ. ಸೌಖ್ಯವೆ? ಎಂದಾಗ ಜನ ಈಗ ತಾರಮ್ಮಯ್ಯ ಆಡೋಲ್ಲವೆ? ಇಂಥಾ ಕಾಲದಲ್ಲಿ ಬರೀ ಢುಂಕೆ—ಲಪಟ್—ಕಾಲರ್‌ಜಂಗ್—ದೋಭಿಚಾಟ್—ವರಸೆ ಪಟ್ಟು ಅಂತ ಪಟ್ಟು ಹಿಡಿದರೆ ಪಥ ಹೇಗೆ ನಡೆಯಬೇಕು? ರಾಜ ಮಹಾರಾಜರ ಎದುರಿಗೆ ಕುಸ್ತಿ ಆಡಿ ಸೈ ಎನ್ನಿಸಿಕೊಂಡೆ—ಕೊಲ್ಲಾಪುರದ ಆಸ್ಥಾನ ಪೈಲ್ವಾನ ಆಗಿದ್ದೆ. ಹೆಸರಿಗೆ ಪೈಲ್ವಾನ ಕೈಯ್ಯಿ ಕೆಸರಾಯಿತಲ್ಲದೆ ಬಾಯಿ ಮೊಸರಾಗಲೇ ಇಲ್ಲ, ಅನ್ನೊ ಹಾಗೆ ಆಯ್ತು ಸ್ಥಿತಿ. ಎಲ್ಲಾದಕ್ಕೂ ಒಂದು ಟೈಂ''

''... ಪರವಾಗಿಲ್ಲ . ''

''ಏನು ಪರವಾಗಿಲ್ಲ!.. ಪಟ್ಟು ನಂಬಿ ಪಾಪರ್ ಆಗೋ ಸ್ಥಿತಿಲಿದ್ದೆ—ಬುದ್ಧಿ ಉಪಯೋಗಿಸಿ ಯುಕ್ತಿ ಹುಟ್ಟೋ ಮಾರ್ಗಕ್ಕೆ ಬಂದೆ. ಸಿರಸಿಯಲ್ಲಿ ಶಿರಾಳ ಕೊಪ್ಪದಲ್ಲಿ ಬಿಟ್ಟೂಬಿಡದೆ ಹದಿನೇಳು ಕುಸ್ತಿ ಆಡಿದೆ —ಆದರೆ ದಕ್ಕಿದ್ದು ಹದಿನಾರು ದಿನದ ಹಾಲಿನ ಖರ್ಚು ನೋಡಿ. ಕುಸ್ತಿಯವರ ಪಾಡು ಒಂದು ತರಹಾ ಸುಸ್ತು ತಾಲೀಂಗೆ ಇಳಿಬೇಕಾದರೆ ತಾಕತ್ತು ಬೇಕು—ತಾಕತ್ತು ಬರಬೇಕಾದರೆ ದಂಡೆ ಹೊಡಿಯಬೇಕು—ದಂಡೆ ಹೊಡೆಯುವುದಕ್ಕೆ ದಮ್ಮುಬೇಕು—ಆ ದಮ್ಮು ದ್ರಾಕ್ಷಿ—ಬಾದಾಮಿ ಗಸಗಸೆ ಬದಾಂಹಾಲು—ಹಾಲುಖೋವ—ಉತ್ತುತ್ತಿ ಒಣ ಕೊಬ್ಬರಿ ಚಿನ್ನದ ರೇಖನ್ನವಲಂಬಿಸಿದೆ—ಆದರೆ ಈ ಸಮಗ್ರ ಸಾಮಗ್ರಿಗೆ ಹಣ ಬೇಕು . ಆ ಹಣ ಪೈಲ್ವಾನನಿಗೆ ಕುಸ್ತಿ ಆಡಿದರೆ ತಾನೇ ಬರೋದು? ಹೇಗಿದೆ ವಿಷವೃತ್ತ (vicious circle)....''

''ವಿಷವೃತ್ತ . ಮದುವೆ ಹುಚ್ಚಿನ ಸಮಾಚಾರ .. ಹ ಹ ಹ್ಹ... ''

''ನೋಡಿದಿರಾ—ಅಳುತ್ತಾ ಬಂದಿರಿ ನಗುತ್ತಾ ಇದ್ದೀರಿ ...ಅದೇ ನೋಡಿ ನನ್ನ ಯುಕ್ತಿ.. ಕೊಲ್ಲಾಪುರದ ಯುವರಾಜರು ಬೂಡ್ಸು ಭಾರಕ್ಕೆ ಕಾಲು ಉಳುಕಿಸಿಕೊಂಡರು —ನಾನು ನೀವಿ—ಸರಿಪಡಿಸಿದೆ—''

"ಅಲ್ಲಿಂದೀಚೆಗೆ ಪೈಲ್ವಾನ್‌ಗಿರಿ ಬಿಟ್ಟು ಡಾಕ್ಟರಾದಂತೆ ತೋರುತ್ತೆ ನನಗೆ .. "

"ಪರವಾಗಿಲ್ಲ... ಸೂಕ್ಷ್ಮ ಬುದ್ಧಿ ನಿಮ್ಮದು--ಇಬ್ಬರು ಷಾಗಿರ್ದರನ್ನು ತಯಾರು ಮಾಡಿ ತಾಲೀಂ ಬಿಟ್ಟೆ. ನಾನು ತೈಲದ ಶೀಶೆ ಹಿಡಿದು ಈ ಊರು ಸೇರಿದೆ. ಅಂತಿಗೆ ತಕ್ಕ ಗೊಂತಿ ಸಂತೆಗೆ ತಕ್ಕ ಕಂತೆ ಅಂತ ಕೇಳಿಲ್ಲವೆ? ನನ್ನ ಹೆಸರು ಆನೆಕಲ್ ಸಂಗಪ್ಪ ಎಂದಿತ್ತು. ಕೆಮ್ಮಣ್ಣು ಮಟ್ಟಿಗೆ ಇಳಿದ ಕೂಡಲೇ ಪೈ|| ಅನುಕೂಲ್ ಸಿಂಗ್ ಎಂದು ಹೆಸರು ಬದಲಿಸಿದೆ. ಈಗ ಕೆಲವರು ಡಾ|| ಅಗ್ರಿಕೋಟ್ ಅಂತಾರೆ—ಹೆಸರಿನಲ್ಲೇನಿದೆ " ಎಂದು ಹೇಳಿ ಮತ್ತೆ ಮುಲಾಮನ್ನು ಸವರಿದರು. ಅಷ್ಟು ಹೊತ್ತಿಗೆ ಮೀನಾಕ್ಷಿ ಟಿಫಿನ್ ಕ್ಯಾರಿಯರ್ ಹಿಡಿದು ಬಂದಳು. ನನ್ನ ಗೆಲುವು ಮುಖ ನೋಡಿ ನಸುನಕ್ಕು ಬಡಿಸಿದಳು. ಆ ಹೊತ್ತಿಗೆ ನನಗೆ ಬೆನ್ನು ಪೂರ್ಣವಾಗಿ ಗುಣ ಹೊಂದಿದಂತೆ ಭಾಸವಾಯಿತು. ಉಂಡು ತೇಗಿ ಹಾಸಿಗೆ ಮೇಲೆ ಕುಳಿತಿದ್ದೆ ಪೈ|| ಅನುಕೂಲ್ ಸಿಂಗರು ಬಂದರು.

"ಸಿಂಗರೇ. ..ನಾನೀಗ ಆರಾಮವಾಗಿದ್ದೇನೆ ಹೊರಡಲಪ್ಪಣೆಯೆ ?" ಎಂದೆ.


"ಕೇವಲ ಒಂದೇ ಮುಲಾಮು—ಒಂದು ಚಿಟಿಕೆ ಭಸ್ಮ ಕೊಡ್ತೇನೆ ಆಮೇಲೆ ಮನೆಗೆ ಹೊರಡಬಹುದು. ಆದರೆ ನನ್ನ ಚಿಕಿತ್ಸಾ ಕ್ರಮವೇ ಹೀಗೆ. ಮೂರು ತಿಂಗಳ ಬೇನೆ ಎಂದು ಮೂರೇ ನಿಮಿಷದಲ್ಲಿ ಹೋಗಿಸಿಬಿಡುವೆ. ಸಧ್ಯ ನಿಮಗೆ ಬಂಗಾರ ಭಸ್ಮದ ಮುಲಾಮು ಮಾಡಬೇಕಾಗಿದೆ ಎಲ್ಲಿ ಕೊಂಚ ಬಂಗಾರ ತರಿಸಿಕೊಡಿ. ಅದರ ಭಸ್ಮ ಒಂದೊಂದು ಚಿಟಿಕೆ ಊಟವಾದ ಮೇಲೆ ಬಾಯಲ್ಲಿ ಹಾಕಿಕೊಂಡು ಹಾಲು ಕುಡಿಯಿರಿ.. ಈ ಮುಲಾಮು ಕೊಳ್ಳಿ.." ಎಂದು ಚಿಕ್ಕ ಡಬ್ಬಿ ಕೊಟ್ಟರು. ಚಿನ್ನದ ವಿಷಯ ಚಿಂತಿಸುತ್ತಿದ್ದೆ. ಮೀನಾಕ್ಷಿ ಕತ್ತಿನಲ್ಲಿನ ಒಂದೇ ಎಳೆಯ ಎರಡು ಸವರನ್ನಿನ ಸರ ತೆಗೆದು ಸಿಂಗರ ಕೈಗಿತ್ತಳು. ನಾನು "ಮುಂದಿನ ತಿಂಗಳ ಸಂಬಳದಲ್ಲಿ ಮತ್ತೆ ಮಾಡಿಸೋಣ" ಎಂದಾಗ— "ಮಾಡಿಸೋದಿರ್‍ಲಿ ನಿಮ್ಮ ಬೆನ್ನು ಮುಟ್ಟಿ ನೋಡಿಕೊಳ್ಳಿ" ಎಂದಳು.

ಮೂರು ಗಂಟೆಗಳ ನಂತರ ಪೈ|| ಅನುಕೂಲಸಿಂಗರು ಒಂದು ಸೀಸೆಯಲ್ಲಿ ಬೂದಿಯಂತಹ ಭಸ್ಮ ತುಂಬಿ ಕೊಟ್ಟರು. ಗೋವಿಂದ ಜಟಕಾ ತಂದ. "ಬರ್‍ತೇನೆ" ಎಂದು ಕೈಜೋಡಿಸಿ ಹಲ್ಲುಗಿರಿದು ಬಂಡಿ ಏರಿದೆ. ಚೈನು ಹೋದರೂ ಯಜಮಾನರು ಮತ್ತೆ ಕೆಲಸಕ್ಕೆ ಹೋಗುವಂತಾದರೆಂಬ ತೃಪ್ತಿಯಿತ್ತು ಮೀನಾಕ್ಷಿ ನೋಟದಲ್ಲಿ.

ಮನೆ ಮುಟ್ಟಿದೆವು. ಮೆಟ್ಟಲು ಹತ್ತತೊಡಗಿದೆ. ಗೋವಿಂದ--ಮೀನಾಕ್ಷಿ ಒಂದೊಂದು ರಟ್ಟೆ ಹಿಡಿದಿದ್ದರು. ಕಡೆಯ ಮೆಟ್ಟಲು ಕೊಂಚ ಎತ್ತರದ್ದು

ಪ್ರಯಾಸದಿಂದ ಹತ್ತಿದಾಗ ಸೊಂಟ ಮತ್ತೆ ಖಳಕ್ ಎಂದಿತು. ಗಾಬರಿಯಿಂದ "ಗೋವಿಂದಾ ಮೀನೂ" ಎಂದೆ ಸರಕ್ಕನೆ ನೋವು ಸೊಂಟದಿಂದ ಬೆನ್ನು ಹುರಿಯ ಸಹಾಯದಿಂದ ಮೇಲಕ್ಕೇರಿ ತಲೆ ತಲುಪಿದ್ದು ಚೆನ್ನಾಗಿ ಗೊತ್ತಾಯಿತು. ಇದರ ದೆಸೆಯಿಂದ ಕತ್ತು ಸೊಟ್ಟಾಯಿತು. "ಅಯ್ಯಯ್ಯೋ!" ಎಂದೆ. ಗೋವಿಂದ ಗಾಬರಿಯಾಗಿ ಏನೇನೋ ಹೇಳಲು ಹೊರಟು ಬರೀ ಕಕ್, ಕಕ್, ಕೆಕ್, ಎಂದು ಕುಕ್ಕುವಂತೆ ಬಿಕ್ಕತೊಡಗಿದ. ಹೊತ್ತು ತಂದು ಹಾಸಿಗೆ ಮೇಲೆ ಹಾಕಿದರು. ಪ್ರೈ|| ಸಿಂಗರ ಮೂರ್ತಿ ಕಣ್ಣಿಗೆ ಕಟ್ಟಿತು.

ಮೀನಾಕ್ಷಿ ಕೊರಳ ಮೇಲೆ ಕೈ ಆಡಿಸಿಕೊಂಡು ಕೈಲಿದ್ದ ಬಂಗಾರ ಭಸ್ಮದ ಸೀಸೆಯನ್ನು ಆಳವಾಗಿ ನೋಡತೊಡಗಿದಳು. —ದಾಶರಥಿ ದೀಕ್ಷಿತ್.



....ಪೇಟೆ ನಾಲ್ಕನೇ ರಸ್ತೇಲಿ ರಾಯರ ಮನೆ ಖಾಲಿಯಾಗಬಹುದು
ದೊಡ್ಡ ಡಾಕ್ಟರನ್ನ ಇಲ್ಲಿಗೆ ಕರೆದುಕೊಂಡು ಹೋಗಿದ್ದರು.

ಮೊಮ್ಮಗ

---

೧. ಹಣ್ಣು ಹಣ್ಣು ಹಣ್ಣು ಮುದುಕಿ,
ಸಣ್ಣ ಪುಟ್ಟ ಹುಡುಗನೊಬ್ಬ—
ಮರದ ನೆರಳಿನಲ್ಲಿ ಕುಳಿತು
ಆಟವಾಡುತ್ತಿದ್ದರು !

೨. ಮುದುಕಿ, ಸಹಜ, ಅರ್ಧ ಕುರುಡು
ಹುಡುಗ, ಪಾಪ, ಪೂರ ಕುಂಟು—
ಅವನು ಎದ್ದು ಓಡಲಾರ,
ಅವಳು ಅಲ್ಲೆ ತಿಷ್ಮತಿ !

೩. ಅರ್ಧ ಕುರುಡಿ ಮುದುಕಿಯೊಡನೆ
ಕುಂಟು ಕಾಲು ಪುಟ್ಟಕೂಸು
ಏನದಾಟ ? ನಲಿವು ? ಅದರ
ಹೆಸರು ಕಣ್ಣ ಮುಚ್ಚಲೆ !

೪. ಹುಡುಗ ಕಣ್ಣ ಮುಚ್ಚಿ, ತಲೆಯ
ತಗ್ಗಿಸುತ್ತ, ಬಗ್ಗಿ, ಬಾಗಿ,
ಅಜ್ಜಿ ಎಲ್ಲಿ ಅವಿತಳೆಂದು
ಮೂರು ಬಾರಿ ಜ್ಯೋತಿಷ !

೫. "ಚಿಕ್ಕ ಕೋಣೆ ಮಂಚದಡಿಯೆ ? ,
ಎಂದು ಕೂಸು ಕಣಿಯ ಪೇಳೆ,
ಮುದುಕಿ ಅಲ್ಲ ಎಂದು ನಕ್ಕು
ಮತ್ತೆ ಹೇಳೋ, ಮೊಮ್ಮಗ !

೬. "ಗೊತ್ತು, ಗೊತ್ತು, ಈಗ ಹಿಡಿವೆ,
ಅಡುಗೆ ಮನೆಯ ಹಂಡೆಯಲ್ಲಿ !"
ಮುದುಕಿ ಒಪ್ಪಲಿಲ್ಲ ಅದಕೆ,
ಮತ್ತೆ ಹೇಳೋ, ಎಂದಳು

೭. "ಓ ಹೊ! ಒಲ್ಲೆ! ಹಿಡಿದೆ ಬಿಡುವೆ!
ಬೀಗ ಮುರಿದ ಬೀರು ಹಿಂದೆ—
ಗೆದ್ದೆ ನಾನು, ಸೋತೆ ನೀನು"
ಎನುತ ಹುಡುಗ ನಕ್ಕನು.

೮. ಆಗ, ಮುದುಕಿ, ಅಂತೆ ತಾನು
ಸುಕ್ಕು ಬೆರಳ ಕಣ್ಣಿಗೊತ್ತಿ
ಮೂರು ಬಾರಿ ಊಹೆ ನುಡಿಯೆ—
ಕೂಸು ಕೂತೆ ಇದ್ದನು!

೯. ಹೊಂಗೆ ಹಸುರು ತಂಪ ಬೀರೆ
ಪಕ್ಕೆ ಹಿಡಿದು ನಕ್ಕು ನಕ್ಕು
ಮುದುಕಿ ಕೂಡ ಮಗುವಿನಂತೆ—
ಮಗುವೊ ನಗೆಯ ಮುಃಸ್ಸೆಯು!

—ರುಪ್ರಮ್ಮ.

ಆಗಿನ ಕಾಲದಲ್ಲಿ ಕನ್ಯೆಯರು "ಸ್ವಯಂವರ" ಮಾಡುತ್ತಿದ್ದರು.
—ಈಗ ಹುಡುಗರು "ಸ್ವಯಂವರ" ಮಾಡಿಸಿಕೊಳ್ಳುತ್ತಾರೆ.

ತಂಟೆಗೆ ಸಿಗಬೇಡ— ಸಿಕ್ಕಿದ್ದು ಬಿಡಬೇಡ!

ಹೆಂಗಸಿನ ಹಕ್ಕಿಗೆ ಧಕ್ಕೆ

ಹೆಂಗಸರೂ ಗಂಡಸರೂ ಸಮ ; ಹೆಂಗಸರೂ ತುಪಾಕಿ ಹಿಡಿದು ಯುದ್ಧ ರಂಗಕ್ಕಿಳಿಯಬೇಕು; ಹೆಂಗಸರೂ ಅಂತರಿಕ್ಷದಲ್ಲಿ ಹಾರಾಡಬೇಕು, ಹೆಂಗಸರೂ ಪಾತಾಳಕ್ಕಿಳಿಯಬೇಕು;—ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ರಾಜಕೀಯದಲ್ಲಿ ಹೆಂಗಸರೂ ಇಳಿದು, ಕೈ ಬಾಯಿ ಕೆಸರು ಮಾಡಿಕೊಂಡು, ವೋಟುಗಳ ಬೇಟೆಗಾಗಿ ಬೂಟಾಟಿಕೆ ಕಲಿಯಬೇಕು, ಎಂಬುದನ್ನೂ ನಾನು ಅನುಮೋದಿಸುವುದಿಲ್ಲ. ಆದರೂ, ಹೆಣ್ಣು ಹೆಂಗಸಿಗೆ, ಕೆಲವು ಹಕ್ಕುಗಳನ್ನು ಅಗತ್ಯವಾಗಿ ಕಾದಿಡಲೇಬೇಕೆಂಬುದನ್ನು ಮಾತ್ರ ನಾನು ಹೇಳದಿರಲಾರೆ.

ಈಗ ನನ್ನ ಮನೆ ಸಂಸಾರದ ವಿಷಯವನ್ನೇ ತೆಗೆದುಕೊಳ್ಳಿ. ಬೆಳ್ಳಿಗ್ಗೆ ಮನೆ ಒಲೆಯನ್ನು ನಾನೇ ಹೊತ್ತಿಸಬೇಕೆಂಬುದು ನನ್ನ ಹಟ; ಆದರೆ, ನನ್ನ ಗಂಡ ಅದಕ್ಕೆ ಸಮ್ಮತಿಸುತ್ತಿಲ್ಲ. ನಾನು ಏಳುವುದರೊಳಗೆ, ಆತ ಅದನ್ನು ಹೊತ್ತಿಸಿ, ಕಣ್ಣು ಕೆಂಪಗೆ ಮಾಡಿಕೊಂಡು, ಕಾಫೀನೂ ಕಾಯಿಸಿ, ನನ್ನ ಹಾಸಿಗೆ ಬಳಿ ಬಂದು, ನನಗೆ ಉಪ್ಚೋಪಚಾರ ಮಾಡುತ್ತಿದಾರೆ. ಇದು ನ್ಯಾಯವೆ? ನೀತಿಯೆ? ನೀವೇ ಹೇಳಿ. ಹಾಗೆಯೇ, ಬಟ್ಟೆ ಒಗೆಯುವುದರಲ್ಲೂ, ಸಹ ನನಗೆ ಅವಕಾಶ ಕೊಡುವುದೇ ಇಲ್ಲ.

ಬಸ್ ಹತ್ತಿ ನಾವಿಬ್ಬರೂ ಲಾಲ್‌ಬಾಗ್ ಕಡೆ ಹೋಗುವಾಗ, ಆತನೇ ಏಕೆ ಟಿಕೇಟಿಗೆ ಹಣವನ್ನು ಕೊಡಬೇಕೆಂದು ನನಗಿನ್ನೂ ಅರ್ಥವಾಗಿಲ್ಲ. ಜಾಗ ಇಲ್ಲದಿದ್ದರೆ, ನಾನೇಕೆ ನಿಂತು ಪ್ರಯಾಣ ಮಾಡಬಾರದು? ಇಕ್ಕಟ್ಟಿನಲ್ಲಿ ಒದ್ದಾಡುವವರು ನಾವು, ಹೆಂಗಸರು. ಗಂಡಸರು ಹಾಯಾಗಿ ಮೇಲಿನ ಕಂಬಿ ಹಿಡಿದು ತಾರಾಡುತ್ತ ತೂರಾಡುತ್ತ ಗಾಳಿ ಕುಡಿಯುತ್ತ ಹೋಗಬಹುದಂತೆ. ನಾವು ಮಾತ್ರ ಕುಕ್ಕರಬಡಿದಿರಬೇಕೆ? ನಮ್ಮನ್ನು ಕಾಣುತ್ತಲೂ, ಇದೇ ಸಮಯ, ಅಂತ ಕೂತಿದ್ದ ಗಂಡಸರ ಪೈಕಿ ಕೆಲವರು ಹಲ್ಲು ಕಿರಿಯುತ್ತ ಎದ್ದು ಜಾಗ ಕೊಡುವುದೇಕೆ ?

ರೈಲಿಗೆ ಹೋಗಬೇಕಾದರೂ, ಹೀಗೆಯೇ? ಗಾಡಿ ತರುವುದಕ್ಕೆ ಗಂಡಸು, ಬಾಡಿಗೆ ಗೊತ್ತುಮಾಡುವುದಕ್ಕೆ ಗಂಡಸು, ಟ್ರಂಕು ಹೊರುವುದಕ್ಕೆ ಗಂಡಸು, ಟಿಕೇಟ್ ಕೊಳ್ಳುವುದಕ್ಕೆ ಮತ್ತೆ ಗಂಡಸು, ಅದನ್ನು ಬಾಗಿಲು ಕಾಯುವ ಬಿಳಿ

ಒಪ್ಪೆಯುವಸಿಗೆ ತೋರಿಸಿ ತೂತು ಹೊಡಿಸುವುದಕ್ಕೂ ಗಂಡಸು, ಜಾಗ ಹುಡುಕು ವುದಕ್ಕೂ ಗಂಡಸು, ಕಿಟಕಿ ತೆರೆಯುವುದಕ್ಕೆ ಗಂಡಸು--ಏಕೆ? ನಮಗೇನು ಶಕ್ತಿ ಇಲ್ಲವೆ? ಛಾತಿ ಇಲ್ಲವೆ? ನಾವೇನು ಬುದ್ಧಿವಂತರಲ್ಲವೆ?

ಮನೆಯಲ್ಲಿ ರೇಡಿಯೊ ತಿರುಗಿಸುವುದಕ್ಕಾಗಿ ನಾನು ಬೆರಳಾಡಿಸಿದರೆ, ಬೆಕ್ಕಿನ ಹಾಗೆ ಅಲ್ಲಿಗೇ ಬಂದುಬಿಡುತ್ತಾರೆ. ಭೂಪತಿ ರಂಗ! "ಯಾವ ಸ್ಟೇಷನ್ ಬೇಕು, ಹೇಳು" ಎಂದು ಮೂಗು ನೀಡುತ್ತ. ಗೋಡೆಗೊಂದು ಮೊಳೆ ಹೊಡೆ ಯುವುದಕ್ಕೂ ನಮಗೆ ಸ್ವಾತಂತ್ರ್ಯವಿಲ್ಲ. ಮಕ್ಕಳಿಗೆ ಸ್ನಾನಮಾಡಿಸುವುದಕ್ಕೂ, ನಾನು ಎಂದು ಅವರೇ ಓಡಿ ಬರುತ್ತಾರೆ. ನಾಯಿ ತೊಳೆಯಬೇಕಾದರೂ, ಅವರೇ ಆಗಬೇಕೆ?

ಏನಿಲ್ಲ! ಒಂದು ಬಲ್ಬು ತೆಗೆದು ಮತ್ತೊಂದು ಬಲ್ಬನ್ನು ತಗುಲಿಸೋಣ ಅಂತ, ನಾನೊಂದು ಬೆಂಚಿನ ಮೇಲೆ ಹತ್ತಿದರೆ, ಹೆಂಗಸರಿಗೆ ಅದೂ ತಕ್ಕುದಲ್ಲ, ಎಂಬ ದುರಹಂಕಾರದಿಂದ, ಆತನೇ ಆರ್ಭಟಮಾಡಿಕೊಂಡು ಅಲ್ಲಿಗೆ ಧಾವಿ ಸುತ್ತಾರೆ.

ವಿದ್ಯಾವಂತರಾದ ನಮಗೆ ವೋಟೂ ಬೇಡ, ಕೋಟೂ ಬೇಡ, ಅಡುಗೆ ಅವಾಂತರಕ್ಕೆ ಗಂಡಸರು ತಲೆ ಹಾಕದಿದ್ದರೆ ಸಾಕು. ನಾವೇನು ಮಾಡಲು ಹೊರಟರೂ, "ತಾಳು! ನಾನಿದ್ದೇನೆ", "ಇಲ್ಲಿ ಕೊಡು, ನನಗೆ, ನಿನಗೆ ಬರೋ ದಿಲ್ಲ", "ನಿನಗೇನು ಬೇಕು, ನನಗೆ ಹೇಳು", "ನೀನು ಕೂತಿರು, ನಾನಿದ್ದೇನೆ ಒದ್ದಾಡುವುದಕ್ಕೆ", "ನಿನ್ನ ಕೈ ಕೊಳೆಯಾಗುತ್ತದೆ; ನಾನು ತರುತ್ತೇನೆ ಇದ್ದಿಲು, ನಾನು ಹಾಕುತ್ತೇನೆ ಗೋಮಯ"—ಎನ್ನುತ್ತ ಗಂಡಸು ಗೋಳಾಡದೆ ಇದ್ದರೆ, ಸಾಕಾಗಿದೆ.

— ಕೇಸರಿ

ದಿನಕ್ಕೆ ಆರು ಮದುವೇ ಮನೇಗೆ ಹೋದರೂ
—ಊಟಕ್ಕೇಳಿ ಅಂತ ಒಬ್ಬೊರೂ ಅನ್ನಲ್ಲ--ಏನು ಕಾಲ ಬಂತಪ್ಪಾ!

• • •

ಮೂಲೆ ಕುರ್ಚಿ

ಪಿ. ಸಿ. ಎಂ., (ಬಿ.ಎಸ್.ಸಿ.) ಪಾಸುಮಾಡಿ, ನಾಲ್ಕು ವರ್ಷಗಳೊಳಗೆ ನನಗೆ ಗುಮಾಸ್ತೆಗಿರಿ ಸಿಕ್ಕಿತು! ಮೊನ್ನೆ ನಾನು ಕಚೇರಿಯಲ್ಲಿ ಹಾಜರಾದೆ. ದೊಡ್ಡ ಸಾಹೇಬರಿಗೆ ಸಲಾಮು ಹೊಡೆದೆ; ಚಿಕ್ಕ ಸಾಹೇಬರಿಗೆ ನಮಸ್ಕಾರ ಮಾಡಿದೆ; ಸೆಕ್ಷನ್ ಸೂಪರಿಂಡೆಂಟರಿಗೆ ಕೈಮುಗಿದೆ; ಅಕೌಂಟೆಂಟರೆದುರು ಕುಳಿತೆ, ಮೂಲೆಯಲ್ಲಿದ್ದ ಒಂದು ಖಾಲಿ ಮೇಜು, ಖಾಲಿ ಕುರ್ಚಿಯನ್ನು ನನಗೆ ತೋರಿಸುತ್ತ ಅವರು ನನಗೆ ನನ್ನ ಮುಂದಿನ ನೌಕರಿಯ ದಿನದಿನದ ಕ್ರಮವನ್ನು ವಿವರಿಸಿದರು.

"ಹನ್ನೆರಡು ಗಂಟೆ ಠಣಾರ್ ಅಂತ ಹೊಡೆಯುತ್ತಲೂ ನೀವು ಮೆಟ್ಟಿಲು ಹತ್ತಿ ಒಳಕ್ಕೆ ನುಗ್ಗಿರಬೇಕು, ದಿನವೂ ಆಗ ಈ ರೂಮನ್ನು ತಿಮ್ಮ ಗುಡಿಸುತ್ತಾ ಇರುತ್ತಾನೆ, ಅವನು ಬಂದಿದ್ದರೆ. ಅರ್ಧ ಗಂಟೆ ಅದಕ್ಕಾಗಿ ನೀವು ವರಾಂಡಾದಲ್ಲೇ ನಿಂತಿರಬೇಕಾಗುತ್ತದೆ. ಅಲ್ಲಿ ಆ ಕುರ್ಚಿಯಲ್ಲಿ ಕೂತು, ನಿಮ್ಮ ಮೇಜಿನ ಧೂಳನ್ನು ನೀವೇ ಒರಸಿಕೊಳ್ಳುತ್ತಾ ಇರಬೇಕು ಆಗ ಗೋವಿಂದಯ್ಯ ಬರುತ್ತಾನೆ,- ಹಿಂದಿನ ದಿವಸದ ಸಿನಿಮ ಚಿತ್ರಗಳನ್ನ ವಿಮರ್ಶೆ ಮಾಡುವುದಕ್ಕೆ. ನೀವೂನೂ ಸಾಧ್ಯವಾದರೆ, ಸಿನಿಮ ಮಂದಿರಗಳಿಗೆಲ್ಲ ಉಚಿತ ಟಿಕೆಟ್ ಸಂಪಾದಿಸಿಕೊಂಡು, ದಿನಕ್ಕೊಂದೆರಡು ನೋಡಿಕೊಂಡು ಬನ್ನಿ. ಆಫೀಸಿನಲ್ಲಿ ಇತರೇ ಗುಮಾಸ್ತೆಯರ ಹತ್ರ ದಿನವೆಲ್ಲ ಚರ್ಚೆಮಾಡಬಹುದು, ಬೇಜಾರಾದಾಗ. ಗೋವಿಂದಯ್ಯನ ಹಿಂದೇನೆ ರಾಮಪ್ಪ ಬರ್ತಾನೆ. ಅವನಿಗೆ ಸಂಗೀತ ಅಂದರೆ ಪ್ರಾಣ; ತ್ಯಾಗರಾಜರದು. ನೀವು ಬೇಕಾದರೆ, ದಿನವೂ ಕೀರ್ತನೆ ಹೇಳಿಕೊಡುತ್ತಾನೆ. ಮಧ್ಯಾಹ್ನ ಕೂಡ ಅವನು ಮೂರು ಟ್ಯೂಷನ್ ಇಟ್ಟುಕೊಂಡಿದಾನೆ, ಇಲ್ಲಿಂದಲೇ ಹೋಗಿ ಬರುತ್ತಿರುತ್ತಾನೆ. ಕೆಲವು ವೇಳೆ, ಪಾಪ, ಸೈಕಲ್ ಪಂಕ್ಚರಾಗಿದ್ದರೆ, ಫೋನ್ ಮೂಲಕಾನೂ ಪಾಠ ಹೇಳಿಕೊಡುತ್ತಾನೆ. ಅವನ ಅವಾಂತರ ತಡೆಯುವುದಕ್ಕಾಗದೆ, ನಾವೆಲ್ಲ ಎಷ್ಟೋ ಸಾರಿ ಹೊರಗಡೆ ಹೋಗಿ ಮರದ ಕೆಳಗೆ ಕೂತಿರುತ್ತೇವೆ, ಸಾಹೇಬರು ಸಿದ್ಧಮಾಡೋವಾಗ. ಅಂದರೆ, ಸಾಹೇಬರ ಊಟ ಇಲ್ಲಿಗೇ ಬರುತ್ತೆ, ಎರಡೂವರೆ ಗಂಟೆಗೆ. ಅದನ್ನ ತಿಂದ ತಕ್ಷಣ, ಅವರ ಗೊರಕೆ ಪ್ರಾರಂಭ, ನಾಲ್ಕೂ ಮುಕ್ಕಾಲರವರೆಗೆ. ಆಗ ಯಾರೂ

ಅವರ ತಂಟೆಗೆ ಹೋಗಬಾರದು ಎಲ್ಲರೂ, ನಾವೆಲ್ ಓದುತ್ತ ಕೂತಿರಬೇಕು: ನೀವು ಬೇಕಾದರೆ, ನನ್ನ ಹಾಗೆ, ಕ್ರಾಸ್ ವರ್ಡ್ ಪಸ್ಲ್ ಮಾಡಬಹುದು.

ಕೃಷ್ಣಪ್ಪ ಅಂತ ನಮ್ಮ ಟೈಪಿಸ್ಟ್ ಹೆಸರು. ನಮ್ಮಲ್ಲಿರುವವರಲ್ಲೆಲ್ಲ ಅವನೇ ಬುದ್ಧಿವಂತ. ಕಚೇರಿಯಲ್ಲಿ ಕಾಲಹರಣ ಮಾಡಲು ಅವನು ವಾರಕ್ಕೊಂದು ಉಪಾಯ ಹುಡುಕಿ ತರುತ್ತಾನೆ. ಈ ವಾರದ್ದು ಉಪಾಯ ಏನು ಅಂದರೆ, ಒಂದು ಜೂಜು, ಬಾಜಿ! ನೋಡಿ, ಈ ಕಿಟಕಿಯಿಂದ ದೊಡ್ಡ ರಸ್ತೆ ಕಾಣಿಸುತ್ತದೆ. ನೂರಾರು ಕಾರುಗಳು ಓಡಾಡುತ್ತವೆ. ನಾವೇನು ಮಾಡಬೇಕು, ಎಲ್ಲರೂ, ಈ ಕಿಟಕಿಯ ಹತ್ರ ಬೆಂಚು ಹಾಕಿಕೊಂಡು ಕೂತುಬಿಡಬೇಕು. ಅಲ್ಲಿ ಕಾಣುತ್ತದಲ್ಲಾ, ಆ ಸಿನಿಮ ಪೋಸ್ಟರು, ಅದರ ಹತ್ರಕ್ಕೆ ಒಂದು ಕಾರು ಬರುತ್ತಲೂ, ಮೊಸಲ ನೀವು, ಉದಾಹರಣೆಗೆ, "ಈ ಕಾರು ಅದನ್ನು ದಾಟಿ, ಇಲ್ಲಿ ನೋಡಿ, ಈ ಹುಣಿಸೆಯ ಮರ, ಇದನ್ನು ಹಾದು ಹೋಗುವುದರೊಳಗೆ, ಮೂರು ಸಲ ಹಾರನ್ ಮಾಡುತ್ತದೆ, ಅಂತೀರಿ. ಅದು ಸರಿಯಾಗಿ ಮೂರು ಸಲ ಹಾರನ್ ಮಾಡಿದರೆ, ನಾವೆಲ್ಲ ತಲಾ ಮೂರು ಕಾಸು ನಿಮಗೆ ಕೊಡುತ್ತೇವೆ. ಹೆಚ್ಚು ಕಡಮೆ ಬಿದ್ದರೆ, ನೀವು ನಮಗೆಲ್ಲಾ ತಲಾ ಒಂದೊಂದು ತೂತಿನ ಕಾಸು ತೆರಬೇಕು. ಸದರಿಯಂತೆ, ಎಲ್ಲರೂ ಹೀಗೆ ಹಾರನ್ ಲೆಕ್ಕ ಹೇಳಬೇಕು, ಬಹಳ ತಮಾಷಾಗಿರುತ್ತದೆ. ಸಾಹೇಬರಿಗೆ ನಾವು ಇನ್ನೂ ಈ ವಿಷಯ ತಿಳಿಸಿಲ್ಲ. ತಿಳಿಸಿದರೆ, ಅವರೂ ಸೇರಿಬಿಡುತ್ತಾರೆ, ಎಂಬ ಭಯ ನಮಗೆ. ಅವರ ವಿನೋದ ಅವರಿಗೆ; ನಮ್ಮ ವಿನೋದ ನಮಗೆ. ಚಿನ್ನದ ಮಡಿಕೆ ಮಣ್ಣಿನ ಗುಡಿಗೆ ಸಹವಾಸ ಮಾಡಿದರೆ, ಮಣ್ಣಿನದೇ ಒಡೆಯುತ್ತದೆ ."


ಕೇಳುತ್ತ ಕುಳಿತಿದ್ದೆ. "ತೀರ್ಥ ಪ್ರಸಾದಗಳಿಗೆ ಏನೇನು ಏರ್ಪಾಟು, ಇಲ್ಲಿ?" ಎಂದು ಪ್ರಶ್ನಿಸಿದೆ. ಅದನ್ನೆಲ್ಲ ವಿವರಿಸಿದರು. ಶಾಕಾಯ, ಲವಣಾಯ, ಉಂಟು. ರೂಪಾಯಿಗೆ ಇಷ್ಟಾಣೆ, ಅಂತ ಹಂಚಿಕೆ ಕ್ರಮವನ್ನೆಲ್ಲ ಹೇಳಿದರು. ಅವಕಾಶ ಕಡಮೆ, ಆದರೂ, ದೇವರು ಸಂಪೂರ್ಣ ಕಣ್ಣುಮುಚ್ಚಿಲ್ಲ: ಧರ್ಮಾತ್ಮರು ಇನ್ನೂ ಇದಾರೆ ಆಫೀಸಿಗೆ ಬರುವವರಲ್ಲಿ; ಮಳೆ ಬೆಳೆಯಾಗುತ್ತಿರುವುದು ಅಂಥವರಿಂದ; ಸಂಬಳ ಮುಟ್ಟಬೇಕಾಗಿಲ್ಲ ಎಂದೆಲ್ಲ ಸ್ಪಷ್ಟಪಡಿಸಿದರು.

ರಜಾ ಗಿಜಾ ಬೇಕಾದರೆ ಏನು ಮಾಡೋದು; ಅಂದೆ. "ಏನೂ ಇಲ್ಲ; ಮೇಜಿನ ಮೇಲೆ, ಒಂದು ಫೈಲನ್ನು ಬಿಚ್ಚಿ ಹರಡಿ, ಅದರ ಮೇಲೆ ಭಾರವಾದ ಒಂದು ಕಲ್ಲಿಡಿ....ನಾಲ್ಕು ದಿನ ಐದು ತನಕ ಎಲ್ಲೂ ಹಾರಿಹೋಗದ ಹಾಗೆ.


ಅಂಥ ಬುಲಾವ್ ಗಿಲಾವ್ ಬಂದರೆ, ಉಳಿದವರು ಗಿಲೀಟ್ ಮಾಡುವುದಕ್ಕನು ಕೂಲವಾಗಿರುತ್ತೆ” ಅಂದರು.

“ಆಗಲಿ, ಸಾರ್! ಖುಷಿಯಾಗಿ ಒಂದಿಷ್ಟು ಕಾಸು ಮಾಡಿಕೊಳ್ಳುತ್ತೇನೆ” ಅಂತ, ಮೂಲೆ ಕುರ್ಚಿಯ ಕಡೆ ಸರಿದೆ ಆಗ, ಅವರು ನನ್ನನ್ನ ಹಿಂದಕ್ಕೆ ಕರೆದು, “ಬನ್ರಿ ಇಲ್ಲಿ! ನಾನು ಯಾರು ಅಂತ ಗೊತ್ತಾಯಿತೇನ್ರಿ?” ಅಂದ್ರು. “ಯಾಕೆ, ಸಾರ್! ತಾವು ಅಕೌಂಟೆಂಟರು, ಗೊತ್ತಾಯಿತು, ಸಾರ್!” ಅಂದೆ. ಮೂಲೆಯಲ್ಲಿ ಕೂತೆ. ನನ್ನ ಮುಂಗಡೆ ಕೂತಿದ್ದ ಗುಮಾಸ್ತೆಯರೊಬ್ಬರು, “ರೀ! ಅಕೌಂಟೆಂಟರಿಗೆ ಬುದ್ಧಿ ನೆಟ್ಟಗಿಲ್ಲ. ಹುಷಾರಾಗಿರಿ” ಎಂದರು.


—ರೇವಣ್ಣ.



“ಹೆಚ್ಚು ಆಹಾರ ಬೆಳೆಯಿರಿ”
ಯೋಜನೆಯಲ್ಲಿ ಇಷ್ಟೇ ಸಾಧಿಸಿರೋದೇ?



ಕಲಿಗೆ



ಕೈಗಾರಿಕೆಗಳೇ ಬೆಂಬಲ

ಬೋಯಿ ರಂಗ—ರಂಗನ ಹನುಮ

ಸರ್ ಎಂ. ವಿಶ್ವೇಶ್ವರಯ್ಯನವರು ಅಂತ ನೀವೆಲ್ಲಾ ಕೇಳಿದ್ದೀರಲ್ಲವೇ ? ಅವರು ಹುಟ್ಟಿದ ವರ್ಷಾನೇ ಅದೇ ಮೋಕ್ಷಗುಂಡಂನಲ್ಲೇ, ಅದೇ ತಿಂಗಳೇನೇ ನಮ್ಮ ಬೋಯಿರಂಗಾನೂ ಹುಟ್ಟಿದ್ದು. ಅಂದ ಮೇಲೆ ಅವನ ವಯಸ್ಸನ್ನೂ ಬೇರೆ ಹೇಳಬೇಕೆ.

ಬೋಯಿರಂಗ ಬೆರಳು ಮಡಿಚೇ ಇಂದಿಗೂ ಲೆಕ್ಕ ಮಾಡೋದು. ಅಕ್ಷರ ಕಾಣ. ಓದಲಾರ. ತಕ್ಕಮಟ್ಟಿಗೆ ಆಸ್ತಿ ಪಾಸ್ತಿ ಮಾಡಿಕೊಂಡಿದ್ದಾನೆ. ಹದಿನಾರು ಜತೆ ಎತ್ತಿದೆ. ಎಂಟೆಮ್ಮೆ ಕರೆಯುತ್ತೆ. ಹಳ್ಳಿಯವರಿಗೆಲ್ಲಾ ಹಿರಿಯವ ಎಂದೆನಿಸಿಕೊಂಡಿದ್ದಾನೆ. ಅಷ್ಟೆ.

ಅವನ ಮಗನಿಗೆ ಈಗ ಅರವತ್ತು. ರಂಗನ ಹನುಮ ಎಂತ ಹೆಸರು. ಅವನೂ ಅಪ್ಪನಂತೇ ಆಲದ ಮರದ ಕೆಳಗೆ ಹಾಯಾಗಿ ಬೆಳೆದವ. ಇಲ್ಲಿನ ತನಕ ಸುಖವಾಗಿ ಬಾಳಿಕೊಂಡಿದ್ದ

ವಿಶ್ವವಿದ್ಯಾಲಯದ ಹುಡುಗರು ಹಿಂದಿನ ಬೇಸಿಗೆ ರಜದಲ್ಲಿ ಆ ಹಳ್ಳಿಗೆ ಹೋದರು. ಅನಕ್ಷರತೆಯನ್ನು ಸಂಪೂರ್ಣ ವಿನಾಶಗೊಳಿಸುತ್ತೇವೆಂದು ಸಂಕಲ್ಪ ಮಾಡಿದ್ದರು. ಹುರುಪಿನ ವಯಸ್ಸಿನವರು.

ಅವರ ಮಾತಿಗೆ ಉತ್ಸಾಹಕ್ಕೆ ಮನಸೋತು ರಂಗನಹನುಮ ರಾತ್ರಿ ಅಕ್ಷರ ಬರೆಯಲು ಕಲಿತ. ಒಂದೇ ವರ್ಷದಲ್ಲಿ ದಿನ ಪತ್ರಿಕೆ ಓದುವಂತಾದ ಕಡೇಗೆ ಅರವತ್ತಕ್ಕೆ "ಅರುಳು ಮರುಳು" ಎಂಬ ಪದ್ಯ ಸಂಗ್ರಹ ಹೊರಡಿಸಿದ.

ರಂಗನ ಮುಂದೆ ರಂಗನ ಹನುಮ ಪ್ರತಾಪ ಕೊಚ್ಚಲು ಶುರುಮಾಡಿದ್ದ

. . .

ಈ ಸಾರಿ ಬೇಸಿಗೆಗೆ ನಮ್ಮ ತರುಣ ಸಾಹಸಿಗಳು ತಿರುಗಿ ಆ ಹಳ್ಳಿಗೆ ಹೋದರು. ರಂಗನ ಹನುಮನೇ ಅವರಿಗೆ ಅಭ್ಯಾಗತವನ್ನು ನೀಡಿ, ತನ್ನ ಕರುವಿನ ಹಟ್ಟಿಯನ್ನೇ ಬಿಡಾರಕ್ಕೆ ಬಿಟ್ಟುಕೊಟ್ಟಿದ್ದ.

ಹರಿಯ ಹುಡುಗ ಒಬ್ಬ ಈ ಸಾರಿ ಬೋಯಿ ರಂಗನಿಗೇ ಅಕ್ಷರ ಕಲಿಸುತ್ತೀನೆ ಎಂದು ಸಂಕಲ್ಪ ಮಾಡಿದ.

ಹಜಾರಾದಲ್ಲಿ ಬೋಯಿರಂಗನನ್ನು ಹಿಡಿದ. "ಅಜ್ಜಾ, ನಿನಗೆ ಅಕ್ಷರ ಕಲಿಸುತ್ತೀನಿ" ಎಂದ.

ಬೋಯಿರಂಗ ಹೇಳಿದ. "ಮರಿಯೋ! ಅಕ್ಷರ ಕಲಿತು ನನಗೇನಾಗಬೇಕು. ಸಾಯೋ ಮುದುಕ ಸುಖವಾಗಿ ಸಾಯ್ತೀನಿ. ಹೀಗೇಕೆ ನನ್ನ ಪ್ರಾಣ ಹಿಂಡಿತಿ" ಎಂದ.

ಹರಿಯ ಹುಡುಗ ಉಪನ್ಯಾಸ ಕೊಟ್ಟ. ಅಕ್ಷರ ಕಲಿತರೆ ಆಗುವ ಸೌಭಾಗ್ಯ ಎಲ್ಲಾ ಹೇಳಿದ. ಒಗಒಹುದಾದ ಅನುಕೂಲಗಳನ್ನೆಲ್ಲಾ ತಿಳಿಸಿದ.

ಬೋಯಿರಂಗ ಎಲೆಡಿಕೆ ಕುಟ್ಟುತ್ತಾ ಮೆಲ್ಲಗೆ ಹೇಳಿದ.

"ನೋಡು. ಹೋದ ರಜಾದಲ್ಲಿ ನೀವು ಬಂದಾಗ ನಮ್ಮ ಹನುಮ ಎಲ್ಲಾ ಕಲಿತ. ಮೂರು ತಿಂಗಳಿಗೆ "ಪೇಪರು" ತರಿಸುಕ್ಕೆ ಶುರು ಮಾಡಿದ. ಆರು ತಿಂಗಳಿಗೆ ಲೇಖನ ಬರೆದ. ಒಂಭತ್ತು ತಿಂಗಳಾಯಿತೋ! ಒಂದು ಹಾಡಿನ ಪುಸ್ತಕ ಹೊರಬಿತ್ತು.

ಆದರೆ ಆ ಮೇಲೆ ಏನು ಮಾಡಿದ ಗೊತ್ತೆ. · ಸುದ್ದಿ ತಿಳಿಯುಕ್ಕೆ ಅಂತ ರೇಡಿಯೋ ತರಿಸಿದ. ರೇಡಿಯೋದಲ್ಲಿ ಪುಸ್ತಕಗಳ ವಿಚಾರ ಕಲಿಯಲು ಕೇಳುತ್ತ ಕೂತ. ರಾಜಕೀಯಕ್ಕೆಲ್ಲಾ ಷಹರಿಂದ ಭಾಷಣಕಾರರು ಬಂದೇ ಬರುತ್ತಾರೆ. ಅವರೇ ಹೇಳುತ್ತಾರೆ. ಅಂದ. ಹಿಂಗಾಗಿ ಈ ಕೊನೇ ಮೂರು ತಿಂಗಳಿಂದ ಒಂದು ಕಾಗದ ಬರೆದಿಲ್ಲ. ಒಂದು ಪುಸ್ತಕ ಓದಿಲ್ಲ. ನನ್ನ ಕಣ್ಣೆದುರಿನ ಹುಡುಗನ ಗತಿಯೇ ಹೀಗಾದರೆ. ನನಗ್ಯಾಕಲಾ ಇದೆಲ್ಲಾ!" ಅಂದ.

ಹರಿಯ ಹುಡುಗನಿಗೆ ಇದೊಂದು "ಮೋಜು" ಆಯಿತು. ಓದು ಕಲಿತರೆ ರೇಡಿಯೋ ವಿಚಾರ ತಿಳಿಯುತ್ತೆ. ರೇಡಿಯೋ ವಿಚಾರ ಗೊತ್ತಾದರೆ ತರಿಸಬೇಕು ಎನ್ನಿಸುತ್ತೆ. ತರಿಸಿದರೆ ಓದಿಗೇ ಕೊಡಲಿ ಪೆಟ್ಟು. ಎಲ! ಎಲಾ! ಏನೀಮಾಯು!!

• • •

"ಆಯ್ಕೆ"

ರಾಮರಾಯರು ಒಂದು ಚಿಟಕೆ ನಶ್ಯ ಜೇಬಿಗೆ ಹಾಕಿ, ನಶ್ಯದ ಡಬ್ಬೀನ ಮೂಗಿಗೆ ಏರಿಸುವುದಕ್ಕೆ ಪ್ರಯತ್ನಪಡುತ್ತಾ ನನಗೆ ಹೇಳಿದರು.

—"ಈ ಆಯ್ಕೆಗೆ ನಾನು ನಿಲ್ಲಬಾರದು ಅಂತಲೇ ಇದ್ದೆ. ಕಂಡ ಹಾಗೇ ಕೃಷ್ಣರಾಯರು ಇದಕ್ಕೆ ನನಗಿಂತ ಲಾಯಖ್ಖು. ನನಗಿಂತಲೂ ಹಿರಿಯರು. ಅನುಭವ ಚೆನ್ನಾಗಿದೆ. ಆದರೆ ಒಂದೊಂದು ನಾರಿ ಸ್ವಲ್ಪ ಮರವು ಹೆಚ್ಚು— ಅದೂ ಆ ಮೂರ್ಛೆ ರೋಗ ಬಂದಾಗ ಹೆಚ್ಚಾಗುತ್ತೆ ಅಷ್ಟೆ."

"ಹೌದು! ಹೌದು! ಕೃಷ್ಣರಾಯರೇ ಈ ನಾರಿ ಆಯ್ಕೆ ಆಗಿಬರಬೇಕು. ಅವರೇ ಈ ಕೆಲಸ ನಿರ್ವಹಿಸಲು ಶಕ್ತರು" ಎಂದೆ.

"ಭೀಮರಾಯರು ಬಲು ಒಳ್ಳೆಯವರು. ಇನ್ನೂ ಹುರುಪಿನ ವಯಸ್ಸು. ಅವ್ರೇ ಚೆನ್ನ ಈ ಕೆಲಸಕ್ಕೆ—ಅನ್ನಿಸುತ್ತೆ ಒಂದೊಂದು ಸರ್ತಿ" ಅಂದರು ರಾಮರಾಯರು ಮರುಕ್ಷಣದಲ್ಲೇ.

"ಹೌದು ಭೀಮರಾಯರು ಇನ್ನೂ ತರುಣರು, ಹೆಸರಿಗೆ ತಕ್ಕ ಶಕ್ತಿ ಇದೆ. ತಂದೆ ಕೂಡಿಟ್ಟ ಕೊಪ್ಪರಿಗೆ ಹಣ ಇದೆ. ವ್ಯವಧಾನ ಇದೆ. ಅವರೇ ಸರಿ ಈ ಅಧಿಕಾರಕ್ಕೆ" ಎಂದು ಹೇಳಿದೆ.

"ನನಗೆ ಈ ಚುನಾವಣೇಲಿ ಸ್ಪರ್ಧಿಸುವುದಕ್ಕೆ ಇಷ್ಟವೇ ಇರಲಿಲ್ಲ. ಸ್ನೇಹಿತರ ಬಲವಂತಕ್ಕೆ ಈ ಮಾಘ ಸ್ನಾನ ಅಷ್ಟೆ—ಸ್ನೇಹಿತರು ಪ್ರೀತಿಯಿಂದ ಹೇಳಿದರೆ ಹೇಗೆ ಬೇಡ ಅನ್ನಲಿ. ಅದಕ್ಕೇ ನಾನೂ ಒಪ್ಪಿಕೊಂಡೆ" ಎಂದರು ರಾಮರಾಯರು.

ಆಯ್ಕೆಯ ದಿನ. ಹೊರಗಡೆಯೇ ರಾಮರಾಯರು ಬಲಗೈ ಎಡಗೈಗೆ ಕುಲುಕಿಸುತ್ತಾ ನಿಂತಿದ್ದರು. ಕೃಷ್ಣರಾಯರು ಎಲ್ಲೋ ಏನೋ ನೋಡುತ್ತಾ, ಅಂಗಿ ಜೇಬನ್ನು ಒಳ ಹೊರಗೆ ಎಳೆಯುತ್ತಿದ್ದರು. ಭೀಮರಾಯ ಹಚ್ಚಿದ ಸಿಗರೇಟನ್ನು ಎಸೆದು ಆರಿದ ಬೆಂಕಿಕಡ್ಡಿ ಸೇದುತ್ತಾ ನಿಂತಿದ್ದರು.

ಆಯ್ಕೆ ಆಯಿತು. ರಾಮರಾಯರು ಆರು ವೋಟುಗಳನ್ನು ಗಳಿಸಿದ್ದರು. ಕೃಷ್ಣರಾಯರು ಮೂರು. ಭೀಮರಾಯರು ಒಂದು.

ದಶಕಂಠಗಳಿಂದ ರಾಮರಾಯರಿಗೆ ಜಯಕಾರವಾಯ್ತು.

ಅಂದಿನಿಂದ ಒಂದು ವರುಷ ಶ್ರೀ ರಾಮರಾಯರೇ ಅಖಿಲ **ನಾಡಿನ** ಕವಿಗಳ ಸಂಘದ ಕೋಶಾಧಿಕಾರಿಗಳಾಗಿ ಕೆಲಸ ವಹಿಸಿಕೊಂಡರು.

—o—

RELEASING AT ALL IMPORTANT CENTRES

THE YEARS' BEST MUSICAL
IMBIBING A TRUE-TO LIFE STORY
UNFURLED ON THE SCREEN

Ambika Films'—

★ ANOKHA PYAR ★

Featuring—DILIP KUMAR, NARGIS & NALINI JAYAWANT

And also Showing from: **27-5-1949**



CENTRAL STUDIOS'

PARAKH

with

MEHTAB KAUSHALYA &
YAKUB

★

Supported by

SHAH NAWAZ
& BALWANT SINGH

★

at

MINERVA TALKIES

BANGALORE

★

Other Films Controlled—

Ranjits' **BELA**
with NIGAR SULTANA &
JAIRAJ

Pradhan Pictures **DASSI**
with RAGINI &
NAJMUL HUSSEIN

Contact (for Mysore State, Coorg & S Kanara)

AJANTA PICTURES

174, GANDHINAGAR, BANGALORE 2

28-5-1949ರಿಂದ ಅಮೋಘ ಪ್ರಾರಂಭ

ಬೆಂಗಳೂರು ಸಿಟಿ

ಶಿವಾಜಿ ಮತ್ತು ಸ್ವಾಸ್ತಿಕ್

ಬೆಂಗಳೂರು ಕಂಡು

ರೂಪಮಹಲ್ ಚಿತ್ರಮಂದಿರಗಳಲ್ಲಿ

ರಾಜರಾಜೇಶ್ವರಿ ಫಿಲಂಸ್‌ರವರ ಈ ವರ್ಷದ ಅತ್ಯುತ್ತಮ ಸಂಗೀತ ಸಾಮಾಜಿಕ ಚಿತ್ರ

ನವಜೀವನಂ (ತಮಿಳು)

—[ಭೂಮಿಕೆಯಲ್ಲಿ]—

ಕಣ್ಣಾಂಬ ★ ಎಸ್. ವರಲಕ್ಷ್ಮಿ ★ ಟಿ. ಎ. ಜಯಲಕ್ಷ್ಮಿ

ನಾಗಯ್ಯ ★ ಶ್ರೀ ರಾಮನ್ ★ ನಾರಾಯಣ ರಾವ್

ಟಿ. ಆರ್. ರಾಮಚಂದ್ರನ್

★

ಸ್ಟುಡಿಯೋ : ಜಮಿನಿ

ಡೈರೆಕ್ಷನ್ : ಕೆ. ಬಿ. ನಾಗಭೂಷಣಂ

Distributors for Mysore State Coorg & S. Canara:

R. V. PICTURES

157, SUBEDARCHATRAM ROAD

BANGALORE 2

Printed by B. S. Iyengar, Bangalore City

Publisher—B N. Gupta Editor—M. Shivaram